ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಮಾರ್ಚ್ 04, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 292 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999


## ವೆನಿಸ್, ವಿಯನ್ನಾ ಮಾದರಿಯಲ್ಲಿ ಚಿತ್ರಕಲಾ ಪ್ರೋತ್ಸಾಹ ಸಿಗಲಿ



ಚಿತ್ರಸಂತೆಯಲ್ಲಿ ಕಲಾಕೃತಿಗಳನ್ನು ವೀಕ್ಷಿಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್



ದಾವಣಗೆರೆ, ಮಾ. 3 - ನಗರದ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ಭಾನುವಾರ ಇಡೀ ದಿನ ಚಿತ್ರಸಂತೆ ಆಯೋಜಿಸಲಾಗಿತ್ತು. 103 ಸ್ಟಾಲ್‌ಗಳಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳ ಕಲಾವಿದರು ತಮ್ಮ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಸಿದರು.

ದಾವಣಗೆರೆ ಚಿತ್ರಕಲಾ ಪರಿಷತ್ ವತಿಯಿಂದ ಮೂರನೇ ವರ್ಷ ದಾವಣಗೆರೆ ಚಿತ್ರಸಂತೆ ನಡೆಸುವ ಮೂಲಕ, ಕಲಾಕೃತಿಗಳನ್ನು ಜನರು ಆಸ್ವಾದಿಸಲು ಅವಕಾಶ ಮಾಡಿಕೊಡಲಾಗಿತ್ತು.

**'ಚಿತ್ರಸಂತೆ'ಯಲ್ಲಿ ಸಚಿವ ಎಸ್ಸೆಸ್ಸೆಂ**

ಚಿತ್ರಸಂತೆ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಬೆಂಗಳೂರು ಚಿತ್ರಕಲಾ ಪರಿಷತ್ ರೀತಿಯಲ್ಲೇ ದಾವಣಗೆರೆ ಚಿತ್ರಕಲಾ ಪರಿಷತ್ ಸಹ ಬೆಳೆಯಲಿ. ಈ ಸಂಸ್ಥೆಗೆ ಸಂಪೂರ್ಣ ಪ್ರೋತ್ಸಾಹ ನೀಡುತ್ತೇನೆ ಎಂದರು.

ಬೆಂಗಳೂರು ಚಿತ್ರಕಲಾ ಪರಿಷತ್‌ಗೆ ಬಿ. ಎಲ್. ಶಂಕರ್, ಎಸ್.ಎಂ. ಕೃಷ್ಣ ಹಾಗೂ ರಾಮಕೃಷ್ಣ ಹೆಗಡೆ ಅಂಥವರು ಅಧ್ಯಕ್ಷರಾಗಿ ಪ್ರೋತ್ಸಾಹ ನೀಡಿದ್ದರು ಎಂದು ಹೇಳಿದರು.

ಫ್ರಾನ್ಸ್ ವಿಶ್ವದಾದ್ಯಂತ ಚಿತ್ರಕಲೆಗೆ ಹೆಸರು ಮಾಡಿದೆ. ವೆನಿಸ್ ಹಾಗೂ ವಿಯನ್ನಾಗಳಲ್ಲಿ ವಿಶಿಷ್ಟ ರೂಪದಲ್ಲಿ ಚಿತ್ರಕಲೆಗೆ ಪ್ರೋತ್ಸಾಹ ಹಾಗೂ ಪ್ರಚಾರ ನೀಡಲಾಗುತ್ತದೆ. ಆ ಮಾದರಿಗಳನ್ನು ಚಿತ್ರಕಲಾ ಪರಿಷತ್ ಹಾಗೂ ಕಲಾವಿದರು (2ನೇ ಪುಟಕ್ಕೆ)

### ಕಲೆಗೂ ಮನ್ನಣೆ ಬೇಕು: ಪ್ರಿಯಾ

ವೈದ್ಯಕೀಯ, ಇಂಜಿನಿಯರಿಂಗ್ ಮುಂತಾದ ವೃತ್ತಿಪರರಿಗೆ ಸಮಾಜದಲ್ಲಿ ಪ್ರೋತ್ಸಾಹ ಇದೆ. ಅದೇ ರೀತಿಯ ಪ್ರೋತ್ಸಾಹ ಕಲಾವಿದರಿಗೂ ಸಿಗಬೇಕಿದೆ ಎಂದು ವಕೀಲೆಯೂ ಆಗಿರುವ ಚಿತ್ರಕಲಾವಿದೆ ಪ್ರಿಯಾ ವಿ. ನಲ್ಲೂರು ಅಭಿಪ್ರಾಯ ಪಟ್ಟಿದ್ದಾರೆ.

ಚಿತ್ರಸಂತೆಯಲ್ಲಿ ಆಯೋಜಿಸಲಾಗಿದ್ದ ಚಿತ್ರಕಲಾ ಪ್ರದರ್ಶನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಲಾವಿದರು ಎಷ್ಟೇ ಕಷ್ಟಪಟ್ಟರೂ ನಿರೀಕ್ಷಿತ ಪ್ರೋತ್ಸಾಹ ಸಿಗುತ್ತಿಲ್ಲ ಎಂದು ವಿಷಾದಿಸಿದರು. (2ನೇ ಪುಟಕ್ಕೆ)



# ಅನಧಿಕೃತ ಪಂಪ್ ಸೆಟ್ ತೆರವುಗೊಳಿಸಿ

## ಕೊನೆ ಭಾಗದ ರೈತರಿಗೆ ನೀರು ಹರಿಸಲು ಕ್ರಮಕ್ಕೆ ಡಿಸಿಗೆ ಸಚಿವ ಎಸ್ಸೆಸ್ಸೆಂ ಸೂಚನೆ



ದಾವಣಗೆರೆ, ಮಾ. 3- ಯಾವುದೇ ಮುಲಾಜಿಗೆ ಒಳಗಾಗದೇ ಭದ್ರಾ ನಾಲೆಗೆ ಅಳವಡಿಸಿರುವ ಅನಧಿಕೃತ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಿ, ಭದ್ರಾ ಅಚ್ಚುಕಟ್ಟು ಪ್ರದೇಶದ ಕೊನೆ ಭಾಗದ ರೈತರಿಗೆ ನೀರು ಹರಿಸಲು ಬಿಗಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ತಾಲ್ಲೂಕಿನ ದೊಡ್ಡಬಾತಿ ಗ್ರಾಮ ಪಂಚಾಯತಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ದೊಡ್ಡಬಾತಿ ಮತ್ತು ಹಳೇಬಾತಿ ಗ್ರಾ.ಪಂ. ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಜನತಾ ದರ್ಶನ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಫೆ.16 ರಿಂದ 28 ರ ವರೆಗೆ ನೀರು ಹರಿಸಿದ ವೇಳೆ ಕಾಲುವೆಯಲ್ಲಿ ಅನಧಿಕೃತ ಪಂಪ್‌ಸೆಟ್ ಅಳವಡಿಸಿದ ಕಾರಣ ಕೊನೆ ಭಾಗದ ರೈತರಿಗೆ ನೀರು ತಲುಪಲು ಸಾಧ್ಯವಾಗಿಲ್ಲ, ಆದರೂ ಸಹ ಅಧಿಕಾರಿಗಳು ತೆರವು ಕಾರ್ಯಾಚರಣೆ ಮೂಲಕ ನೀರು ತಲುಪಿಸಲು ಕ್ರಮ ಕೈಗೊಂಡಿದ್ದಾರೆ ಎಂದರು.

ಅನಧಿಕೃತ ಪಂಪ್‌ಸೆಟ್ ತೆರವು ಕಾರ್ಯಾಚರಣೆಯಲ್ಲಿ ತಾವು ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ. ನೀರಿನ ಸೋರಿಕೆಗೆ ಕಡಿವಾಣ ಹಾಕುವ ಮೂಲಕ ಕೊನೆ ಭಾಗದ ರೈತರಿಗೆ ನೀರು ತಲುಪಿಸಲಾಗುತ್ತದೆ ಎಂದು ಹೇಳಿದರು.

**ಮನೆ ಬಾಗಿಲಿಗೆ ಸರ್ಕಾರಿ ಸೌಲಭ್ಯ:** ಜನಸ್ನೇಹಿ ಆಡಳಿತ ನೀಡುವ ಸದುದ್ದೇಶದಿಂದ 'ಜನತಾ ದರ್ಶನ' ಕಾರ್ಯಕ್ರಮದ ಮೂಲಕ ಮನೆ ಬಾಗಿಲಿಗೆ ಸರ್ಕಾರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪಂಚ ಗ್ಯಾರಂಟಿಗಳನ್ನು ಅರ್ಹರಿಗೆ ತಲುಪಿಸುವ ಕೆಲಸವನ್ನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಜನಪ್ರತಿನಿಧಿಗಳ ಮೂಲಕ ಮಾಡಲಾಗುತ್ತಿದೆ ಎಂದರು.

ಇಡೀ ರಾಜ್ಯದಲ್ಲಿ ದಾವಣಗೆರೆಯಲ್ಲಿ ಮುಂಚೂಣಿಯಲ್ಲಿದೆ. ಅಧಿಕಾರಿಗಳ ಸ್ಪಂದನೆ ಕೂಡ ಸಕಾರಾತ್ಮಕವಾಗಿರುವ ಕಾರಣ ಯೋಜನೆಗಳ ಅನುಷ್ಠಾನದಲ್ಲಿ ಯಶಸ್ವಿಯಾಗುತ್ತಿವೆ. ಹೊಟ್ಟೆಗೆ ಹಿಟ್ಟು, ಇರಲು ಸೂರು, ಉತ್ತಮ ಆರೋಗ್ಯ ಮತ್ತು ಮಕ್ಕಳಿಗೆ ಉತ್ತಮ ಶಿಕ್ಷಣ ಇವು ಪ್ರತಿಯೊಬ್ಬರಿಗೂ ಇರಬೇಕಾದ ಅಗತ್ಯತೆಗಳು. ಸರ್ಕಾರದ ಆಶಯ ಕೂಡ ಇದೇ ಆಗಿದೆ ಎಂದು ಹೇಳಿದರು.

**'ಜನತಾ ದರ್ಶನ'ದ ಅರ್ಜಿಗಳು ಶೇ. 98 ರಷ್ಟು ಇತ್ಯರ್ಥ :** ಕಡ್ಲೇಬಾಳು ಗ್ರಾಮದಲ್ಲಿ ಮೊದಲ ಜನತಾ ದರ್ಶನ ಕಾರ್ಯಕ್ರಮ ಮಾಡಿದ್ದು, ಅಲ್ಲಿ ಸ್ವೀಕರಿಸಲಾದ ಅರ್ಜಿಗಳಲ್ಲಿ ಶೇ. 98 ರಷ್ಟು ವಿಲೇ ಮಾಡಲಾಗಿದೆ. ಕೆಲವು ಕೌಟುಂಬಿಕ ಸಮಸ್ಯೆ, ವ್ಯಾಜ್ಯಗಳ ಕಾರಣ ಕೆಲವೊಂದು ಅರ್ಜಿಗಳ ಇತ್ಯರ್ಥ ಮಾಡಲು ಸಾಧ್ಯವಾಗಿಲ್ಲ. ಅಮೃತ ನಗರದಲ್ಲಿ ಅನೇಕ ವರ್ಷಗಳಿಂದ ಮನೆಗಳಿಗೆ ಹಕ್ಕುಪತ್ರಗಳನ್ನು ಕೊಡಲು ಸಾಧ್ಯವಾಗಿರಲಿಲ್ಲ, ಆದರೆ ಈ ಜನತಾ ದರ್ಶನದಲ್ಲಿ ಇತ್ಯರ್ಥ ಮಾಡಿ ಎಲ್ಲಾ ಮನೆ ಮಾಲೀಕರಿಗೆ ಇ-ಸ್ವತ್ತು ದಾಖಲೆ ವಿತರಿಸಲಾಗಿದೆ ಎಂದರು.

ಅದರಂತೆ ದೊಡ್ಡಬಾತಿ ಮತ್ತು ಹಳೇಬಾತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 908 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಇದರಲ್ಲಿ ಮನೆ, ನಿವೇಶನ, ಕುಡಿಯುವ (2ನೇ ಪುಟಕ್ಕೆ)

# ಪಂಚಮಿತ್ರ ವಾಟ್ಸಾಪ್ ಸೇವೆಗೆ ಸಚಿವ ಎಸ್ಸೆಸ್ಸೆಂ ಚಾಲನೆ

ದಾವಣಗೆರೆ, ಮಾ.3- ಗ್ರಾಮ ಪಂಚಾಯಿತಿ ಸೇವೆಗಳನ್ನು ಪಡೆಯಲು ಡಿಜಿಟಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದು ಪಂಚಮಿತ್ರ ಸೇವೆಗಳನ್ನು ವಾಟ್ಸಾಪ್ ಚಾಟ್‌ನಲ್ಲಿ ಪಡೆಯಲು ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಚಾಲನೆ ನೀಡಿದರು.

ಅವರು ಭಾನುವಾರ ದಾವಣಗೆರೆ ತಾ; ದೊಡ್ಡಬಾತಿ ಗ್ರಾಮದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯಿತಿ ದೊಡ್ಡಬಾತಿ, ಹಳೆಬಾತಿಯ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾದ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಪಂಚಮಿತ್ರ ವಾಟ್ಸಾಪ್ ಸೇವೆಗೆ ಚಾಲನೆ ನೀಡಿದರು.

ಗ್ರಾಮೀಣ ಜನರಿಗೆ 89 ಸೇವೆಗಳನ್ನು ನೀಡುವ

**ಗ್ರಾಮೀಣರಿಗೆ ಇನ್ನೂ ಸುಲಭ, ಗ್ರಾಮ ಪಂಚಾಯಿತಿ ಸೇವೆಗಳು ವಾಟ್ಸಪ್‌ನಲ್ಲಿ**

ಪಂಚಮಿತ್ರ ಪೋರ್ಟಲ್ ಮತ್ತು ವಾಟ್ಸಾಪ್ ಚಾಟ್ ಡಿಜಿಟಲ್ ವೇದಿಕೆಯ ಮೂಲಕ ಪಡೆಯಲು ಅವಕಾಶ ಕಲ್ಪಿಸಿದೆ. ಇದರ ಮೂಲಕ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ವಿವಿಧ 17 ಸೇವೆಗಳು, ಇತರೆ ಇಲಾಖೆಗಳಿಗೆ ಸಂಬಂಧಿಸಿದ 72 ಸೇವೆಗಳು ಈ ವೇದಿಕೆಯಲ್ಲಿ ಸಿಗಲಿವೆ. ಕಟ್ಟಡ ಪರವಾನಗಿ, ಹೊಸ ನೀರು ನಲ್ಲಿ ಸಂಪರ್ಕ, (5ನೇ ಪುಟಕ್ಕೆ)

# ಜಲಾಂತರ್ಗಾಮಿ ರೋಬೋಟ್ ರೂಪಿಸಿದ ಐಐಟಿ ಸಂಶೋಧಕರು

ನವದೆಹಲಿ, ಮಾ. 3 - ಕ್ಷಿಪ್ರವಾಗಿ ಸಮಸ್ಯೆಗಳನ್ನು ಗುರುತಿಸುವ ಹಾಗೂ ನೀರಿನಡಿಯಲ್ಲಿ ಕಾರ್ಯನಿರ್ವಹಿಸುವ ವೆಚ್ಚ ಕಡಿಮೆ ಮಾಡುವ ರೋಬೋಟ್ ಒಂದನ್ನು ಮಂಡಿ ಹಾಗೂ ಪಾಲಕ್ಕಾಡ್‌ಗಳ ಐ.ಐ.ಟಿ.ಗಳ ಸಂಶೋಧಕರು ರೂಪಿಸಿದ್ದಾರೆ.

**ಅಣೆಕಟ್ಟೆಗಳಲ್ಲಿ ನೀರಿನ ಅಧ್ಯಯನ ನಡೆಸಬಲ್ಲ ರೋಬೋಟ್**

ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿ.ಆರ್.ಡಿ.ಒ.ದ ನೌಕಾ ಸಂಶೋಧನಾ ಮಂಡಳಿಯು ಈ ಸಂಶೋಧನೆಗೆ ಅನುದಾನ ನೀಡಿದೆ. ಈ ಕುರಿತ ಅಧ್ಯಯನವನ್ನು ಜರ್ನಲ್ ಆಫ್ ಇಂಟಲಿಜೆಂಟ್ ಅಂಡ್ ರೋಬೋಟಿಕ್ ಸಿಸ್ಟಮ್ಸ್ ಹಾಗೂ ಓಷಿಯನ್ ಇಂಜಿನಿಯರಿಂಗ್‌ಗಳಲ್ಲಿ ಪ್ರಕಟಿಸಲಾಗಿದೆ.

ಜಲಾಂತರದಲ್ಲಿ ನಿಗಾ ವಹಿಸಲು, ಕಾರ್ಯನಿರ್ವಹಣೆ ದಕ್ಷತೆ ಹೆಚ್ಚಿಸಲು, ಅಪಾಯ ಕಡಿಮೆ ಮಾಡಲು ಹಾಗೂ ವೆಚ್ಚ ಕಡಿಮೆ ಮಾಡಲು ಈ ಆಧುನಿಕ ರೋಬೋಟ್ ರೂಪಿಸಲಾಗಿದೆ ಎಂದು ಸಂಶೋಧಕರು ಹೇಳಿದ್ದಾರೆ. ಭೂಮಿಯ ಶೇ.71ರಷ್ಟು ಭಾಗದಲ್ಲಿ ಸಮುದ್ರವಿದೆ. ಆದರೆ, ಸಮುದ್ರದ (5ನೇ ಪುಟಕ್ಕೆ)

## ಒಡಿಶಾ : ಡಿ.ಆರ್.ಡಿ.ಒ. ಕೇಂದ್ರದ ಸೈನಿಕ ಆತ್ಮಹತ್ಯೆ

ಕೇಂದ್ರಪಾರ (ಒಡಿಶಾ), ಮಾ. 3 - ಒಡಿಶಾದ ಕೇಂದ್ರಪಾರ ಜಿಲ್ಲೆಯ ಡಿ.ಆರ್.ಡಿ.ಒ.ದ ಕೇಂದ್ರವೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದ 35 ವರ್ಷದ ಸೈನಿಕ, ತನ್ನ ಸೇವಾ ಬಂದೂಕಿನಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ತಮಿಳುನಾಡಿನ ಸಿಪಾಯಿ ರಾಜ್ ಶೇಖರನ್ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

## ಪಾಕ್: ಮಳೆಗೆ 37 ಸಾವು

ಪೇಷಾವರ, ಮಾ. 3 - ಪಾಕಿಸ್ತಾನದಲ್ಲಿ ಕಳೆದ 48 ಗಂಟೆಗಳಲ್ಲಿ ಸುರಿದ ಮಳೆಯಿಂದಾಗಿ ನಡೆದ ಘಟನೆಗಳಲ್ಲಿ ಕನಿಷ್ಠ 37 ಜನ ಸಾವನ್ನಪ್ಪಿದ್ದಾರೆ.

ಪಾಕಿಸ್ತಾನದಾದ್ಯಂತ ಮಳೆಯಾಗಿದ್ದು, ಹಲವಾರು ಮನೆಗಳು ಕುಸಿದಿವೆ ಹಾಗೂ ಭೂಕುಸಿತವಾಗಿ ರಸ್ತೆ ತಡೆಯಾಗಿದೆ. ಖೈಬರ್ ಪಖ್ತುಂಖ್ವ (5ನೇ ಪುಟಕ್ಕೆ)

# ಹೌತಿ ಉಗ್ರರ ದಾಳಿಯಲ್ಲಿ ಹಡಗು ಪತನ

ದುಬೈ, ಮಾ. 3 - ಕೆಂಪು ಸಮುದ್ರದಲ್ಲಿ ಯೆಮೆನ್ ಹೌತಿ ಉಗ್ರರು ನಡೆಸಿದ ದಾಳಿಯಲ್ಲಿ ಹಡಗೊಂದು ಮುಳುಗಿದೆ. ಹಮಾಸ್ ವಿರುದ್ಧ ಇಸ್ರೇಲ್ ಸಮರ ಸಾರಿದ ನಂತರ ಉಗ್ರರ ದಾಳಿಗೆ ಸಿಲುಕಿ ಮುಳುಗಿದ ಮೊದಲ ಹಡಗು ಇದಾಗಿದೆ.

ರಸಗೊಬ್ಬರ ಸಾಗಿಸುತ್ತಿದ್ದ ಹಡಗಾದ ರುಬ್ಯಮಾರ್ ಮುಳುಗಿದೆ. ಇದರಿಂದಾಗಿ ಕೆಂಪು ಸಮುದ್ರ ಹಾಗೂ ಹರಳಿನ ದಂಡೆಗಳಿಗೆ ಹಾನಿಯಾಗುವ ಕಳವಳ ಎದುರಾಗಿದೆ.

ಹೌತಿಗಳ ನಿರಂತರ ದಾಳಿಯಿಂದಾಗಿ ಸರಕು ಹಾಗೂ ಇಂಧನ ಪೂರೈಸುವ ಹಡಗುಗಳಿಗೆ ತೊಡಕಾಗಿದೆ. ಏಷಿಯಾದಿಂದ ಮಧ್ಯ ಪ್ರಾಚ್ಯ ಹಾಗೂ ಯುರೋಪ್‌ಗಳ ಹಡಗುಗಳು ಈ ಮಾರ್ಗದಲ್ಲಿ ತೆರಳುತ್ತವೆ.

**ಉಗ್ರರ ದಾಳಿಗೆ ಕೆಂಪು ಸಮುದ್ರದಲ್ಲಿ ಮುಳುಗಿದ ಹಡಗು**

ಹಲವಾರು ಹಡಗುಗಳು ಈಗಾಗಲೇ ಪರ್ಯಾಯ ಮಾರ್ಗ ಹುಡುಕಿಕೊಳ್ಳುತ್ತಿವೆ.

ಈಗ ಹಡಗು ಮುಳುಗಿರುವುದರಿಂದ ಇನ್ನಷ್ಟು ಹಡಗುಗಳು ಮಾರ್ಗ ಬದಲಿಸುವ ಸಾಧ್ಯತೆ ಇದೆ. ಇದರಿಂದಾಗಿ ಜಾಗತಿಕ ಹಣದುಬ್ಬರ ಇನ್ನಷ್ಟು ಹೆಚ್ಚಾಗಲಿದೆ ಮತ್ತು ಈ ಪ್ರಾಂತ್ಯಕ್ಕೆ ನೆರವು ಪೂರೈಕೆಯ ಮೇಲೂ ಪರಿಣಾಮವಾಗಲಿದೆ.

ಬೆಲಿಜ್ ಧ್ವಜ ಹೊಂದಿದ್ದ ರುಬ್ಯಮಾರ್ ಹಡಗಿನ ಮೇಲೆ ಫೆಬ್ರವರಿ 18ರಂದು ದಾಳಿ ನಡೆಸಲಾಗಿತ್ತು. ಕೆಂಪು ಸಮುದ್ರ ಹಾಗೂ ಏಡನ್ ಕೊಲ್ಲಿಯನ್ನು ಸಂಪರ್ಕಿಸುವ ಮಹತ್ವದ ಜಲಮಾರ್ಗವಾದ ಬಾಬ್ ಎಲ್ - ಮಂದೆಬ್ ಸ್ಟ್ರೇಟ್‌ನಲ್ಲಿ ದಾಳಿ ನಡೆಸಲಾಗಿತ್ತು. ದಾಳಿ ನಂತರ ಈ ಹಡಗು ಕುಸಿಯಲು ಆರಂಭಿಸಿತ್ತು.

ಈ ಹಡಗಿನಲ್ಲಿ ಸುಮಾರು 21 ಸಾವಿರ ಮೆಟ್ರಿಕ್ ಟನ್ ಅಮೋನಿಯಂ ಫಾಸ್ಫೇಟ್ ಸಲ್ಫೇಟ್ ರಸಗೊಬ್ಬರ ಇತ್ತು. ಈ ಹಡಗಿನ ಕುಸಿತ ಕೆಂಪು ಸಮುದ್ರದಲ್ಲಿ ಪರಿಸರ ಹಾನಿಯ ಕಳವಳ ತಂದಿದೆ ಎಂದು ಅಮೆರಿಕದ ನೌಕಾ ಪಡೆಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಹಡಗಿನ ಮೇಲೆ ದಾಳಿ ನಡೆದ ನಂತರ ಅದನ್ನು ಸುರಕ್ಷಿತವಾಗಿ ಬಂದರಿಗೆ ತರುವ ಪ್ರಯತ್ನ ನಡೆಸಲಾಗಿತ್ತು. (2ನೇ ಪುಟಕ್ಕೆ)

# ನಾಳೆ ಹೆಬ್ಬಾಳು ಗ್ರಾಮದಲ್ಲಿ ತಾಲ್ಲೂಕು ಸಾಹಿತ್ಯ ಸಮ್ಮೇಳನ






ದಾವಣಗೆರೆ, ಮಾ.3- ತಾಲ್ಲೂಕಿನ ಹೆಬ್ಬಾಳು ಗ್ರಾಮದ 'ಅನುಭವ ಮಂಟಪ' ಶ್ರೀ ರುದ್ರೇಶ್ವರ ವಿರಕ್ತಮಠದಲ್ಲಿ ಇದೇ ಮಾ.5ರಂದು ದಾವಣ ಗೆರೆ ತಾಲ್ಲೂಕು 10ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಸುಮತಿ ಜಯಪ್ಪ ತಿಳಿಸಿದ್ದಾರೆ.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣದ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಗುತ್ತದೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಬಿ.ಟಿ. ಜಾಹ್ನವಿ ಅವರನ್ನು ಆಯ್ಕೆ ಮಾಡಲಾಗಿದ್ದು, 9 ಗಂಟೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದೆ ಎಂದರು.

10 ಗಂಟೆಗೆ ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರು ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಮಹಾದ್ವಾರ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಬಳ್ಳಾರಿ ಸಿದ್ದಮ್ಮ ಮಹಾಮಂಟಪ (2ನೇ ಪುಟಕ್ಕೆ)

## ಪಾಕ್ ಪ್ರಧಾನಿಯಾಗಿ ಶರೀಫ್ ಇಂದು ಪ್ರಮಾಣ ವಚನ



ಇಸ್ಲಾಮಾಬಾದ್, ಮಾ. 3 – ಪಾಕಿಸ್ತಾನದ ಪ್ರಧಾನ ಮಂತ್ರಿಯಾಗಿ ಶೆಬಾಜ್ ಶರೀಫ್ ಅವರನ್ನು ಆಯ್ಕೆ ಮಾಡಲಾಗಿದ್ದು, ಅವರು ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಶರೀಫ್ ಅವರ ಪಾಕಿಸ್ತಾನ ಮುಸ್ಲಿಂ ಲೀಗ್ - ನವಾಜ್ ಹಾಗೂ ಪಾಕಿಸ್ತಾನ ಪೀಪಲ್ಸ್ ಪಾರ್ಟಿಗಳು ಜೊತೆಯಾಗಿ ಮೈತ್ರಿ ಸರ್ಕಾರ ರಚಿಸಿವೆ.

ಶರೀಫ್ ಅವರು ಈ ಹಿಂದೆ ಏಪ್ರಿಲ್ 2022ರಿಂದ ಆಗಸ್ಟ್ 2023ರ ನಡುವೆ ಪ್ರಧಾನ ಮಂತ್ರಿಯಾಗಿದ್ದರು. ಅಧ್ಯಕ್ಷ ಆರಿಫ್ ಅಳ್ವಿ ಅವರು ಸೋಮವಾರ ಮಧ್ಯಾಹ್ನ 3 ಗಂಟೆಗೆ ಪ್ರಮಾಣ ವಚನ ಬೋಧಿಸಲಿದ್ದಾರೆ.

# ಧರ್ಮ ಮಾರ್ಗದಲ್ಲಿ ನಡೆದರೆ ನೆಮ್ಮದಿ ಬದುಕು

## ನ್ಯಾಮತಿ: ದೇವಸ್ಥಾನ ಪ್ರವೇಶೋತ್ಸವ, ಧರ್ಮ ಸಭೆಯಲ್ಲಿ ತರಳಬಾಳು ಶ್ರೀ



ನ್ಯಾಮತಿ, ಮಾ.3- 'ಪ್ರತಿಯೊಬ್ಬರೂ ಅಂತರಂಗದ ದನಿಗೆ ಓಗೊಟ್ಟು ಧರ್ಮ ಮಾರ್ಗದಲ್ಲಿ ನಡೆದರೆ ನೆಮ್ಮದಿಯ ಬದುಕು ಸಾಗಿಸಬಹುದು ಎಂದು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಅವರು ನ್ಯಾಮತಿ ತಾಲ್ಲೂಕಿನ ಹಳೇಮಳಲಿ ಗ್ರಾಮದಲ್ಲಿ ಭಾನುವಾರ ಬಸವೇಶ್ವರ ಸ್ವಾಮಿಯ ನೂತನ ದೇಗುಲದ ಪ್ರವೇಶೋತ್ಸವ, ವಿಗ್ರಹ ಪ್ರತಿಷ್ಠಾಪನೆ ಹಾಗೂ ನೂತನ ಗೋಪುರ ಕಳಸಾರೋಹಣ ಪ್ರಯುಕ್ತ ಹಮ್ಮಿಕೊಂಡಿದ್ದ ಧರ್ಮ ಸಭೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಭಕ್ತರು ದೇಗುಲದ ಗರ್ಭಗುಡಿಯನ್ನು ಪವಿತ್ರ ತಾಣವಾಗಿ ಭಾವಿಸಿದಂತೆ ತನ್ನ ಮನಸ್ಸನ್ನೂ ಶುದ್ಧವಾಗಿಟ್ಟುಕೊಳ್ಳಬೇಕು. ದೇವರ ವಿಗ್ರಹಕ್ಕೆ ಪ್ರಾಣ ಪ್ರತಿಷ್ಠಾಪನೆ ಎಂಬುದು ತಪ್ಪು ಕಲ್ಪನೆ. ಭಕ್ತರಲ್ಲಿ ಭಕ್ತಿ ಪ್ರತಿಷ್ಠಾಪನೆ ಆದಾಗ ಮಾತ್ರ ಅದಕ್ಕೆ ನಿಜವಾದ ಅರ್ಥ ಬರುತ್ತದೆ ಎಂದರು.

ಸಂಸಾರದ ಸಮಸ್ಯೆಗಳಿಗಾಗಿ ಮನೆಯ ಹೆಣ್ಣು ಮಕ್ಕಳು ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಬಾರದು. ಗ್ರಾಮದ ಗುರು, ಹಿರಿಯರ ಸಮ್ಮುಖದಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಮನುಷ್ಯನಿಗೆ ಹಣದ ಮೇಲಿನ ವ್ಯಾಮೋಹ ಕಡಿಮೆಯಾಗಬೇಕು. ಗಳಿಸಿದ ಸಂಪತ್ತು ಧರ್ಮ ಕಾರ್ಯಗಳಿಗೆ ಸದ್ಬಳಕೆ ಮಾಡಿಕೊಳ್ಳುವ ವಿವೇಚನೆ ಮೈಗೂಡಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಸಭೆಯಲ್ಲಿ ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಶಾಂತ ಭೀಷ್ಮ ಸ್ವಾಮೀಜಿ , ಶಾಸಕ ಡಿ.ಜಿ. ಶಾಂತನಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡೇರಿ ಜಿ.ವಿಶ್ವನಾಥ್, ಸಾಧು ವೀರಶೈವ ಸಮಾಜದ ಹೊನ್ನಾಳಿ (5ನೇ ಪುಟಕ್ಕೆ)




# ಮಠದ ಸ್ವಾಮೀಜಿ ಆಗುವುದು ಕಷ್ಟವಲ್ಲ, ಒಂದು ಮನೆಯ ಸೊಸೆಯಾಗುವುದು ಕಷ್ಟ



## ಶ್ರೀ ತರಳಬಾಳು ಜಗದ್ಗುರುಗಳ ವಿಶ್ಲೇಷಣೆ

ಚಿತ್ರದುರ್ಗ, ಮಾ.3- ಮಠದ ಸ್ವಾಮೀಜಿಗಳಾಗುವುದು ಕಷ್ಟವೇನಲ್ಲ. ಒಂದು ಮನೆಯ ಸೊಸೆಯಾಗುವುದು ತುಂಬಾ ಕಷ್ಟ. ಗಂಡನ ಮನೆಯಲ್ಲಿ ಎಲ್ಲರಿಗೂ ಹೊಂದಿಕೊಂಡು ಬಾಳುವುದು ಇನ್ನು ಕಠಿಣ ಎಂದು ಸಿರಿಗೆರೆಯ ತರಳಬಾಳು ಬೃಹನ್ಮಠದ ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಕಳೆದ 2 ರಂದು ನಿಧನರಾದ ಸಿರಿಗೆರೆ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ರಾ.ವೆಂಕಟೇಶ ಶೆಟ್ಟಿಯವರ ಪತ್ನಿ ಶ್ರೀಮತಿ ಸುಕನ್ಯಾರವರ ಆತ್ಮಶಾಂತಿಗಾಗಿ ವಾಸವಿ ಮಹಲ್ ರಸ್ತೆಯಲ್ಲಿರುವ ಕನ್ಯಕಾ ಮಹಲ್‌ನಲ್ಲಿ ಬುಧವಾರ ಏರ್ಪಡಿಸಲಾಗಿದ್ದ ವೈಕುಂಠ ಸಮಾರಾಧನೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿ ಮಾತನಾಡಿದರು.

ತಂದೆ - ತಾಯಿಯನ್ನು ಬಿಟ್ಟು ಹೆಣ್ಣು ಗಂಡನ ಮನೆಯ ವಾತಾವರಣಕ್ಕೆ ಹೊಂದಿಕೊಳ್ಳುವುದು ಸುಲಭವಲ್ಲ. ಮನುಷ್ಯನ ಜೀವನದಲ್ಲಿ ಜನನ - ಮರಣ ಸಾಮಾನ್ಯ. ಹೃದಯದ ಭಾವನೆಗಳನ್ನು ದುಡ್ಡಿನಲ್ಲಿ ಅಳೆಯಬಾರದು. ಆರ್ಯವೈಶ್ಯ ಸಮಾಜದವರು ಯಾರಾದರೂ ಮೃತಪಟ್ಟಾಗ ಅಂತ್ಯಕ್ರಿಯೆಯಾಗುವ ತನಕ ಎಲ್ಲವನ್ನು ನಿಭಾಯಿಸಿ ಮಾನವೀಯತೆ ಮೆರೆಯುತ್ತಾರೆ. ಸಮುದ್ರದ ಅಡಿಯಲ್ಲಿ ಕಪ್ಪೆಚಿಪ್ಪು, ಮುತ್ತುರತ್ನಗಳು ಸಿಗುತ್ತವೆ. ಅಕ್ಕಮಹಾದೇವಿ, ವಾಸವಿ ಜೀವನದಲ್ಲಿ ಒಂದು ತೆರನಾದ ಕಷ್ಟಗಳು ಎದುರಾಗುತ್ತವೆ. ಇವರಿಬ್ಬರ ಜೀವನದಲ್ಲಿಯೂ ಅಧ್ಯಾತ್ಮಿಕ ಸೆಳೆತವಿತ್ತು. ಆರ್ಯವೈಶ್ಯ ಸಮಾಜದವರಿಗೆ ಮತ್ತೊಬ್ಬರ ಕಷ್ಟಕ್ಕೆ ಮರುಗುವ ಗುಣವಿದೆ ಎಂದು ಶ್ಲಾಘಿಸಿದರು.

ಆರ್ಯವೈಶ್ಯ ಸಮಾಜಕ್ಕೂ ನಮ್ಮ ಮಠಕ್ಕೂ ಒಡನಾಟವಿದೆ. ಭಗವದ್ಗೀತೆಯನ್ನು ಸರಿಯಾಗಿ ಓದಿ ಅರ್ಥೈಸಿಕೊಳ್ಳದ ಮೂರ್ಖರು. ನಾನಾ ರೀತಿಯ ವ್ಯಾಖ್ಯಾನಗಳನ್ನು ಮಾಡುತ್ತಾರೆಂದರು.

ಯಾವುದೇ ಕೆಲಸವನ್ನು ಮಾಡುವಾಗ ಫಲಾಪೇಕ್ಷೆಯನ್ನು ಬಯಸಬಾರದು. ರಾ.ವೆಂಕಟೇಶ ಶೆಟ್ಟಿಯವರು ತಮ್ಮ ಪತ್ನಿಯ ಸೇವೆಯನ್ನು ಪ್ರೀತಿಯಿಂದ ಮಾಡಿದ್ದಾರೆ, ಕರ್ತವ್ಯವೆಂದುಕೊಳ್ಳಲಿಲ್ಲ. ಎಲ್ಲರ ಜೀವನದಲ್ಲಿ ಬಾಲ್ಯ, ಯೌವ್ವನ, ಮುಪ್ಪು ಇದ್ದೇ ಇರುತ್ತದೆ. ಆತ್ಮಕ್ಕೂ - ಶರೀರಕ್ಕೂ ಸಂಬಂಧ ವಿದೆ. ಮನುಷ್ಯನ ಜೀವನಕ್ಕೂ ಮರಗಿಡಗಳಿಗೂ ವ್ಯತ್ಯಾಸವಿದೆ. ಶ್ರೀಮತಿ ಸುಕನ್ಯಾ ವೆಂಕಟೇಶ್‌ರವರು ದೈಹಿಕವಾಗಿ ಅಗಲಿರಬಹುದು. ಆದರೆ, ಮಾನಸಿಕವಾಗಿ ಅವರ ಪತಿ ಮತ್ತು ಕುಟುಂಬದವರ ಮನದಲ್ಲಿದ್ದಾರೆಂದು ಹೇಳಿದರು.

ಇತಿಹಾಸ ಸಂಶೋಧಕ ಡಾ. ಬಿ.ರಾಜಶೇಖರಪ್ಪ ಮಾತನಾಡಿ, ಸನ್ಯಾಸ ಜೀವನಕ್ಕಿಂತ ದಾಂಪತ್ಯ ಜೀವನ ದೊಡ್ಡದು ಎಂದು ವೀರ ಸನ್ಯಾಸಿ ಸ್ವಾಮಿ ವಿವೇಕಾನಂದ ಹೇಳಿದ್ದಾರೆ. ಗಂಡನ ಆಗು-ಹೋಗುಗಳಿಗೆ ಹೆಂಡತಿ ಆಶ್ರಯ ಮುಖ್ಯ ಎಂದರು.

ರಾ.ವೆಂಕಟೇಶ ಶೆಟ್ಟಿ ಮಾತನಾಡಿ, ನನ್ನ ಪತ್ನಿ ಸುಕನ್ಯಾ 48 ವರ್ಷಗಳ ಕಾಲ ನನ್ನ ಜೊತೆ ಸಂಸಾರ ನಡೆಸಿ, ಈಗ ಅಗಲಿರುವ ನೋವು ಸಹಿಸಿಕೊಳ್ಳಲು ಆಗುತ್ತಿಲ್ಲ. ಮರಕ್ಕೆ ಬೇರಿನಂತಿದ್ದರು. ಗಂಡ-ಹೆಂಡತಿ ನಡುವೆ ಪರಸ್ಪರ ಪ್ರೀತಿಯಿರುತ್ತದೆ. ಅನಾರೋಗ್ಯಕ್ಕೆ ತುತ್ತಾದಾಗ ಸ್ವಲ್ಪವೂ ಬೇಸರಪಟ್ಟುಕೊಳ್ಳದೇ ಪ್ರೀತಿಯಿಂದ ನನ್ನ ಹೆಂಡತಿಯ ಸೇವೆ ಮಾಡಿದ್ದೇನೆ. ಕರ್ತವ್ಯ ಅಂದುಕೊಳ್ಳಲಿಲ್ಲ. ಈಗಲೂ ನನ್ನ ಜೊತೆಯಲ್ಲಿಯೇ ಇದ್ದಾಳೆಂದುಕೊಂಡಿದ್ದೇನೆ. ನನಗೂ ಮತ್ತು ನನ್ನ ಕುಟುಂಬಕ್ಕೂ ಸಿರಿಗೆರೆಯ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಅನುಗ್ರಹವಿದೆ. ಎಲ್ಲರನ್ನು ಕೈಹಿಡಿದು ಮೇಲಕ್ಕೆತ್ತಿದ್ದಾರೆ. ಈಗ ನನ್ನ ಕುಟುಂಬದ ಎಲ್ಲರೂ ಸುಖವಾಗಿದ್ದಾರೆಂದು ಭಾವುಕರಾದರು.

ಕಾಶಿ ವಿಶ್ವನಾಥ ಶೆಟ್ಟಿ, ಟಿ.ವಿ.ಸುರೇಶ್‌ಗುಪ್ತ ಇನ್ನು ಅನೇಕರು ಮಾತನಾಡಿದರು.

# ಅನಧಿಕೃತ ಪಂಪ್ ಸೆಟ್ ತೆರವುಗೊಳಿಸಿ

**(1ನೇ ಪುಟದಿಂದ)** ನೀರು, ಚರಂಡಿ, ರಸ್ತೆ ನಿರ್ಮಾಣಕ್ಕೆ ಸಂಬಂಧಿತ ಅರ್ಜಿಗಳಾಗಿದ್ದು, ಇವುಗಳನ್ನು ಸಾಧ್ಯವಾದಷ್ಟು ಸ್ಥಳದಲ್ಲೇ ಮತ್ತೆ ಉಳಿದವುಗಳನ್ನು ಹಂತ ಹಂತವಾಗಿ ಪರಿಹರಿಸಲಾಗುವುದು ಎಂದು ತಿಳಿಸಿದರು.

ದೊಡ್ಡಬಾತಿ ಮತ್ತು ಹಳೇಬಾತಿ ಗ್ರಾ.ಪಂ. ವ್ಯಾಪ್ತಿಯ ಬಡ ಜನರಿಗೆ 155 ಮನೆಗಳಿಗೆ ಇ-ಸ್ವತ್ತು ಪ್ರಮಾಣ ಪತ್ರ ನೀಡಲಾಗಿದ್ದು, ಡಿಸಿಸಿ ಬ್ಯಾಂಕಿನಿಂದ ಸಾಲದ ರೂಪದಲ್ಲಿ ರೈತರಿಗೆ 89 ಹಸುಗಳನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದರು.

'ಜನತಾ ದರ್ಶನ' ಕಾರ್ಯಕ್ರಮಕ್ಕೂ ಮೂರು ದಿನಗಳ ಮುಂಚೆಯೇ ಅಧಿಕಾರಿಗಳು ಗ್ರಾಮಗಳಲ್ಲಿ ಸಮೀಕ್ಷೆ ನಡೆಸಿ, ಜನರ ಅಹವಾಲುಗಳನ್ನು ಆಲಿಸಿ, ಜನರ ಮನೆ ಬಾಗಿಲಿಗೆ ಬಂದು ಅರ್ಜಿ ಪಡೆದು, ಸರ್ಕಾರದ ಸೌಲಭ್ಯ ಕಲ್ಪಿಸುವ ಪ್ರಯತ್ನ ಮಾಡಲಾಗುತ್ತಿದ್ದು, ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಜನರಿಗೆ ನೇರವಾಗಿ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಇನ್ನೂ ಯಾರಿಗಾದರೂ ತಲುಪದೇ ಇದ್ದಲ್ಲಿ ತಕ್ಷಣ ನಮಗೆ ತಿಳಿಸಿದರೆ ಅಂತವರಿಗೆ ತಲುಪಿಸಲಾಗುವುದು ಎಂದರು.

**ಕಾಂಗ್ರೆಸ್ ಸರ್ಕಾರದಿಂದ ಜನಪರ, ಅಭಿವೃದ್ಧಿ ಪರ ಆಡಳಿತ :** ಜನರಿಗೆ ಅಗತ್ಯವಾಗಿ ಬೇಕಾದ ಆಹಾರ ದವಸ, ಆರೋಗ್ಯ ರಕ್ಷಣೆ, ಕುಡಿಯುವ ನೀರು ಪೂರೈಕೆ, ವಸತಿ, ಶಿಕ್ಷಣವನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಜನಪರ ಆಡಳಿತ ನಡೆಸುತ್ತಿದೆ ಎಂದು ಹೇಳಿದರು.

ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ ಹೆಚ್ಚುವರಿಯಾಗಿ 100 ಕೊಠಡಿಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಕಾಡಜ್ಜಿ ಮತ್ತು ಆವರಗೊಳ್ಳಕ್ಕೆ ಹೊಸದಾಗಿ ಪಶು ಆಸ್ಪತ್ರೆ ಮಂಜೂರಾಗಿದೆ. ಮುಂದಿನ ದಿನಗಳಲ್ಲಿ ದೊಡ್ಡಬಾತಿ ಕೆರೆ ಅಭಿವೃದ್ಧಿಪಡಿಸಿ, ಈ ಭಾಗದ ಹಾಗೂ ಸುತ್ತಮುತ್ತಲಿನ ಜನರಿಗೆ ಮತ್ತು ಗ್ರಾಮಗಳಿಗೆ ನೀರಿನ ಅನುಕೂಲ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

**ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಿ:** ಮುಂಗಾರು, ಹಿಂಗಾರು ಮಳೆಯ ಕೊರತೆ ಮತ್ತು ಜಲಾಶಯದಲ್ಲಿ ನೀರಿನ ಸಂಗ್ರಹದ ಕೊರತೆಯ ಕಾರಣದಿಂದ ಬಿರು ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಅಗತ್ಯವಿದ್ದಲ್ಲಿ ಹೊಸ ಕೊಳವೆ ಬಾವಿ ಕೊರೆಯಿಸಲು ಮತ್ತು ಬಾಡಿಗೆ ಆಧಾರದ ಮೇಲೆ ಕೊಳವೆ ಬಾವಿಗಳನ್ನು ಪಡೆಯುವ ಮೂಲಕ ಬೇಸಿಗೆ ನಿರ್ವಹಣೆ ಮಾಡಬೇಕಾಗಿದೆ ಎಂದರು.

ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ, ಅಭಾವ ಇದೆ ಎಂದು ದೂರು ಬರದಂತೆ ಕ್ರಮ ವಹಿಸಬೇಕು. ಚನ್ನಗಿರಿ, ಜಗಳೂರು ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುವ ನಿರೀಕ್ಷೆಯಿದ್ದು, ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಎಸ್ಸೆಸ್ಸೆಂ ಹೇಳಿದರು.

ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಪ್ರಾಸ್ತಾವಿಕವಾಗಿ ಮಾತನಾಡಿ, ದೊಡ್ಡಬಾತಿ, ಹಳೇಬಾತಿ ಗ್ರಾಮದಲ್ಲಿ ಕಳೆದ ಮೂರು ದಿನಗಳಿಂದ ಮನೆ ಮನೆಗೆ ಭೇಟಿ ನೀಡಿ ಜನರ ಕುಂದುಕೊರತೆಯ ಅಹವಾಲು ಸ್ವೀಕರಿಸಲಾಗಿದೆ. ಎರಡು ಗ್ರಾಮಗಳಿಂದ 908 ಅರ್ಜಿಗಳು ಇಲ್ಲಿಯವರೆಗೆ ಸ್ವೀಕೃತವಾಗಿವೆ. ಜ್ವಲಂತ ಸಮಸ್ಯೆಗಳ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್ ಮಾತನಾಡಿ, ಅಂಗನವಾಡಿ ಕೇಂದ್ರ ನಿರ್ಮಾಣ, ಖಾತರಿಯಡಿ ದನದ ಕೊಟ್ಟಿಗೆ ನಿರ್ಮಾಣ, ಸಚಿವರ ನಿರ್ದೇಶನದಂತೆ ದೊಡ್ಡಬಾತಿ ಗ್ರಾಮದಲ್ಲಿ ಎಲ್ಲಾ ಕಡೆ ಚರಂಡಿ ನಿರ್ಮಾಣ ಮಾಡಲು ಕ್ರಮ ವಹಿಸಲಾಗುತ್ತದೆ ಎಂದರು.

ದೊಡ್ಡಬಾತಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಮಂಜುಳಾ ಹನುಮಂತಪ್ಪ, ಅಧ್ಯಕ್ಷತೆ ವಹಿಸಿದ್ದರು. ಹಳೇಬಾತಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಸೀತಾ ರಾಮಪ್ಪ, ದೊಡ್ಡಬಾತಿ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಭಾನುವಳ್ಳಿ ಸಿದ್ದಪ್ಪ, ಹಳೇಬಾತಿ ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಪುಷ್ಪ ಎ, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರೀನ್ ಭಾನು ಎಸ್.ಬಳ್ಳಾರಿ, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕರಾದ ಬೇತೂರು ಕರಿಬಸಪ್ಪ, ಮುದೇಗೌಡ್ರು ಗಿರೀಶ್, ಮುಖಂಡರಾದ ಬಿ.ಕೆ.ಪರಶುರಾಮ್, ಜೆಸಿಬಿ ಹನುಮಂತಪ್ಪ, ಕೆ.ಜಿ. ಉಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಕಿಯರಾದ ಪ್ರೇಮ, ಉಮಾ ಮತ್ತು ಸಂಗಡಿಗರು ನಾಡಗೀತೆ ಹಾಡಿದರು. ಉಪವಿಭಾಗಾಧಿಕಾರಿ ದುರ್ಗಾಶ್ರೀ ಸ್ವಾಗತಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ನಿರೂಪಿಸಿದರು.

ಇದೇ ವೇಳೆ ಗರ್ಭಿಣಿಯರಿಗೆ ಸೀಮಂತ ಕಾರ್ಯ, ವಿಕಲಚೇತನರಿಗೆ ಸಾಧನಾ ಸಲಕರಣೆ, ಕಾರ್ಮಿಕ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ನಿವೇಶನ ಹಕ್ಕುಪತ್ತ ವಿತರಣೆ ಸೇರಿದಂತೆ ಇನ್ನಿತರೆ ಸೌಲಭ್ಯಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಂವಿಧಾನ ಪೀಠಿಕೆ ಓದುವ ಮೂಲಕ ಪ್ರತಿಜ್ಞೆ ಸ್ವೀಕರಿಸಲಾಯಿತು.

# ಮೌಲ್ಯಯುತ ಶಿಕ್ಷಣಕ್ಕೆ ಆದ್ಯತೆ ನೀಡಬೇಕು : ಬಸವರಾಜ ಸಂಗಪ್ಪನವರ್



ಹರಪನಹಳ್ಳಿ

ಹರಪನಹಳ್ಳಿ, ಮಾ. 3 - ಮಕ್ಕಳು ಕೇವಲ ಪಠ್ಯ ಚಟುವಟಿಕೆಯಲ್ಲಿ ಇದ್ದರೆ ಸಾಕಾಗುವುದಿಲ್ಲ, ಪಠ್ಯೇತರ ಚಟುವಟಿಕೆಗಳ ತೊಡಗಿಕೊಂಡಾಗ ಮಾತ್ರ ವ್ಯಕ್ತಿತ್ವ ವಿಕಸನವಾಗಲಿದೆ ಎಂದು ವಿಜಯನಗರ ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ ಅಭಿಪ್ರಾಯಪಟ್ಟರು.

ಪಟ್ಟಣದ ಶ್ರೀ ರಾಜರಾಜೇಶ್ವರ ಪಬ್ಲಿಕ್ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಎನ್ನುವುದು ಶಿಸ್ತನ್ನು ಕಲಿಸುವ, ಉತ್ತಮ ವ್ಯಕ್ತಿಯನ್ನಾಗಿಸುವ ಮಾಧ್ಯಮವಾಗಿದ್ದು, ಪುಸ್ತಕದ ವಿದ್ಯೆ ಮಸ್ತಕಕ್ಕೆ ಹೋಗುವುದು ಮಾತ್ರವಲ್ಲ, ಸರ್ವಾಂಗೀಣ ಚಟುವಟಿಕೆಗಳನ್ನು ಮಾಡುವಂತಾಗಬೇಕು ಎಂದ ಅವರು, ಶಿಕ್ಷಕರ ಪಾಠಕ್ಕೆ, ಪೋಷಕರ ಸಹಕಾರ ಅಗತ್ಯ. ಈ ಮೂಲಕ ವಿದ್ಯಾರ್ಥಿಗಳು ದೇಶ, ರಾಜ್ಯಕ್ಕೆ ಕೀರ್ತಿ ತರುವಂತವರಾಗಬೇಕು ಎಂದು ಹೇಳಿದರು.

ಪ್ರಗತಿಪರ ಚಿಂತಕ, ನಿವೃತ್ತ ಶಿಕ್ಷಕ ಇಸ್ಮಾಯಿಲ್ ಎಲಿಗಾರ್ ಮಾತನಾಡಿ, ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಕೊಡುವ ಮೂಲಕ ಉತ್ತಮ ಮೌಲ್ಯಗಳ ಸಹ ಕಲಿಸುವುದು ಅಗತ್ಯವಿದೆ ಎಂದರು.

ಜನ್ಮ ಕೊಟ್ಟವರು ಪೋಷಕರು. ಆದರೆ, ಶಿಕ್ಷಕರಿಗೆ ಉತ್ತಮ ಪ್ರಜೆಯನ್ನಾಗಿ ಮಾಡುವ ಹೊಣೆಗಾರಿಕೆ ಇರುತ್ತದೆ. ಪೋಷಕರು ಮತ್ತು ಶಿಕ್ಷಕರ ನಡುವೆ ವಿದ್ಯಾರ್ಥಿಗಳು ಉತ್ತಮ ಮೌಲ್ಯಗಳನ್ನು ಕಲಿಯುವುದು ಅಗತ್ಯವಿದ್ದು, ಯಾವುದೇ ಒತ್ತಡದ ಶಿಕ್ಷಣ ಮಕ್ಕಳಿಗೆ ಬೇಡ, ಇತರೆ ಮಕ್ಕಳೊಂದಿಗೆ ತಮ್ಮ ಮಕ್ಕಳನ್ನು ಹೋಲಿಕೆ ಮಾಡಬೇಡಿ. ಅವರು ಯಾವುದಾದರೂ ಆಸಕ್ತಿ ಕ್ಷೇತ್ರದಲ್ಲಿ ಉನ್ನತ ಸಾಧನೆಗೆ ತಮ್ಮ ಪ್ರೋತ್ಸಾಹ ನೀಡಿ ಎಂದು ಕಿವಿಮಾತು ಹೇಳಿದರು.

ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಆರ್.ವಿ. ಗೋವಿಂದರಾಜು, ಪತ್ರಕರ್ತ ಪಿ. ಕರಿಬಸಪ್ಪ ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯ ತಿಮ್ಮಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕೀಲು ಮೂಳೆ ನಾಟಿ ವೈದ್ಯ ಬಿ.ಬಿ.ಹೊಸೂರಪ್ಪ, ಆರೋಗ್ಯ ಇಲಾಖೆಯ ಅರ್ಪಿತ, ಪಾರ್ವತಮ್ಮ, ಶಿಕ್ಷಕರಾದ ಜಾಥಪ್ಪ, ದುರುಗೇಶ್, ಸತೀಶ, ರಶ್ಮಿ, ಶಮಾ, ರೂಪಾ, ಹಮೀದಾ, ಮಂಜುಳಾ, ನೇತ್ರಾವತಿ, ಸೇರಿದಂತೆ ಶಾಲಾ ಸಿಬ್ಬಂದಿಗಳು, ಪೋಷಕರು, ಮಕ್ಕಳು ಇದ್ದರು.

ಹರಪನಹಳ್ಳಿ ಪಟ್ಟಣದ ಶ್ರೀ ರಾಜರಾಜೇಶ್ವರಿ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವವನ್ನು ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರು ಉದ್ಘಾಟಿಸಿದರು.

# ಹೌತಿ ಉಗ್ರರ ದಾಳಿಯಲ್ಲಿ ಹಡಗು ಪತನ

**(1ನೇ ಪುಟದಿಂದ)** ಆದರೆ, ನಂತರದಲ್ಲಿ ಆ ಪ್ರಯತ್ನವನ್ನು ಕೈ ಬಿಡಲಾಗಿತ್ತು.

ಹೌತಿ ಉಗ್ರರು 2014ರಿಂದ ಯೆಮೆನ್ ರಾಜಧಾನಿ ಸನಾ ಅನ್ನು ವಶಪಡಿಸಿಕೊಂಡಿದ್ದಾರೆ. 2015ರಿಂದ ಸೌದಿ ನೇತೃತ್ವದ ಮೈತ್ರಿಕೂಟದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ.

ಹೌತಿ ಬಂಡುಕೋರರ ಮೇಲೆ ಅಮೆರಿಕ ನೇತೃತ್ವದಲ್ಲಿ ತಿಂಗಳಿಗೂ ಹೆಚ್ಚು ಕಾಲ ವೈಮಾನಿಕ ದಾಳಿ ನಡೆಸಲಾಗಿದೆ. ಆದರೂ, ಹೌತಿ ಉಗ್ರರು ಪ್ರತಿದಾಳಿ ನಡೆಸುತ್ತಿದ್ದಾರೆ. ಗಾಜಾ ಪಟ್ಟಿಯಲ್ಲಿ ಇಸ್ರೇಲ್ ತನ್ನ ಕಾರ್ಯಾಚರಣೆ ನಿಲ್ಲಿಸುವವರೆಗೂ ದಾಳಿ ಮುಂದುವರೆಸುವುದಾಗಿ ಹೌತಿ ಉಗ್ರರು ಬೆದರಿಕೆ ಹಾಕಿದ್ದಾರೆ. ಪ್ರಸಕ್ತ ಅಮೆರಿಕ ಹಾಗೂ ಮೈತ್ರಿ ಪಡೆಗಳ ನಾಲ್ಕರಿಂದ ಎಂಟು ಸಮರ ಹಡಗುಗಳು ಈ ಮಾರ್ಗದಲ್ಲಿ ನಿರಂತರ ಗಸ್ತು ನಡೆಸುತ್ತಿವೆ. ಇತ್ತೀಚಿನ ದಿನಗಳಲ್ಲಿ ದಾಳಿಯ ತೀವ್ರತೆಯೂ ಕಡಿಮೆಯಾಗಿದೆ. ದಾಳಿ ತೀವ್ರತೆ ಕಡಿಮೆಯಾಗಿರುವುದಕ್ಕೆ ಕಾರಣವೇನು ಎಂಬುದು ಸ್ಪಷ್ಟವಾಗಿಲ್ಲ.

# ಅಗತ್ಯವಾದಲ್ಲಿ ಸ್ಫೋಟ ಪ್ರಕರಣ ಎನ್.ಐ.ಎ.ಗೆ : ಸಿದ್ದರಾಮಯ್ಯ

ಚಿಕ್ಕಮಗಳೂರು, ಮಾ. 3 - ಅಗತ್ಯವಾದಲ್ಲಿ ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್.ಐ.ಎ.) ವಹಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣವನ್ನು ಸಿ.ಸಿ.ಬಿ.ಗೆ ವಹಿಸಲಾಗಿದೆ. ಈ ಸಂಬಂಧ ತನಿಖೆ ಪ್ರಗತಿಯಲ್ಲಿದ್ದು, ಆರೋಪಿಗಾಗಿ ತೀವ್ರ ಹುಡುಕಾಟ ನಡೆಯುತ್ತಿದೆ. ಅಗತ್ಯ ಬಿದ್ದರೆ ಎನ್.ಐ.ಎ.ಗೆ ವಹಿಸುವ ಬಗ್ಗೆಯೂ ಚಿಂತನೆ ನಡೆಸಲಾಗುವುದು ಎಂದರು.

ಬ್ರಾಂಡ್ ಬೆಂಗಳೂರು ಆಗುವ ಬದಲು ಬಾಂಬ್ ಬೆಂಗಳೂರು ಆಗುತ್ತಿದೆ ಎಂದು ಬಿಜೆಪಿ ಟೀಕಿಸುತ್ತಿರುವುದಕ್ಕೆ ಆಕ್ಷೇಪಿಸಿರುವ ಸಿದ್ದರಾಮಯ್ಯ, ಬಿಜೆಪಿ ನಾಯಕರು ಈ ಬಗ್ಗೆ ರಾಜಕೀಯ ಪ್ರೇರಿತ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಸ್ಫೋಟವಾಗಿದ್ದಾಗ ಬೆಂಗಳೂರು ಏನಾಗಿತ್ತು? ಬಾಂಬ್ ಬೆಂಗಳೂರು ಆಗಿತ್ತೆ? 2008 ರಿಂದ 4 ಬಾರಿ ಬಾಂಬ್ ಸ್ಫೋಟ ಆಗಿದ್ದಕ್ಕೆ ಏನೆಂದು ಕರೆಯಬೇಕು? ಇದು ದೇಶದ ರಕ್ಷಣೆಯ ಹೊಣೆ ಹೊತ್ತಿರುವ ಎನ್.ಐ.ಎ. ಹಾಗೂ ವಿದೇಶಿ ಗುಪ್ತಚರ ಸಂಸ್ಥೆ 'ರಾ'ಗಳ ವೈಫಲ್ಯವಲ್ಲವೇ? ನಾನು ಬಾಂಬ್ ಸ್ಫೋಟವನ್ನು ಖಂಡಿಸುತ್ತೇನೆ. ಸಾವು ನೋವಿನ ವಿಚಾರದಲ್ಲಿ ಬಿಜೆಪಿಯವರು ರಾಜಕೀಯ ಮಾಡಬಾರದು ಎಂದವರು ಹೇಳಿದರು.

ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಬ್ಲಾಸ್ಟ್ ಆಗಿತ್ತು ಹಾಗೂ ಹಿಂದೊಮ್ಮೆ ಮಲ್ಲೇಶ್ವರಂನಲ್ಲಿರುವ ಬಿಜೆಪಿ ಕಚೇರಿ ಮುಂದೆಯೇ ಬಾಂಬ್ ಸ್ಫೋಟವಾಗಿತ್ತು. ಆಗ ಬಿಜೆಪಿಯೇ ಅಧಿಕಾರದಲ್ಲಿತ್ತು. ಅವರಂತೆಯೇ ಇದನ್ನು ನಾವು ರಾಜಕೀಯ ದೃಷ್ಟಿಯಿಂದ ನೋಡಿದೆವಾ? ಎಂದು ಪ್ರಶ್ನಿಸಿದರು.

ನಾನು ಬಾಂಬ್ ಸ್ಫೋಟವನ್ನು ಬೆಂಬಲಿಸುತ್ತಿಲ್ಲ. ಆದರೆ, ಬಿಜೆಪಿ ಈ ವಿಷಯದಲ್ಲಿ ರಾಜಕೀಯ ಮಾಡುವುದನ್ನು ಖಂಡಿಸುತ್ತೇನೆ. ಬಾಂಬ್ ಸ್ಫೋಟದಂತಹ ಪ್ರಕರಣಗಳು ಸಣ್ಣ ಘಟನೆಗಳಾಗುವುದಿಲ್ಲ. ಜನರ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ ಎಂದೂ ಅವರು ಹೇಳಿದರು.

# ನಗರದಲ್ಲಿ ಇಂದು ಮಹಿಳೆಯರಿಗೆ ವಿವಿಧ ಸ್ಪರ್ಧೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇನ್ನರ್ ವ್ಹೀಲ್ ಸಂಸ್ಥೆ ವಿದ್ಯಾನಗರ ವತಿಯಿಂದ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು ಮಾಗನೂರು ಬಸಪ್ಪ ರೋಟರಿ ಭವನ ದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿವೆ.

ವಿವಾಹ ವಿಚ್ಛೇದನ ಸಾಧಕ, ಬಾಧಕಗಳು ವಿಷಯದ ಬಗ್ಗೆ ಚರ್ಚಾ ಸ್ಪರ್ಧೆ ಹಾಗೂ ಭಾರತದ ಪ್ರಪ್ರಥಮ ಸಾಧಕ ಮಹಿಳೆಯರು (ಇವರಲ್ಲಿ ಒಬ್ಬರ ಬಗ್ಗೆ) ಭಾಷಣ ಸ್ಪರ್ಧೆ ನಡೆಯಲಿದೆ.

ಆಸಕ್ತರು ಮಂಜುಳಾ ಕರ್ಜಿಗಿ (94826 00894), ಪ್ರೇಮಾ ಮಹೇಶ್ವರಪ್ಪ (94810 10502), ವಿಜಯಾ ಕಡೇಕೊಪ್ಪ (94495 02623) ಇವರಲ್ಲಿ ಹೆಸರು ನೋಂದಾಯಿಸಿ.

# 11ರಂದು ಮಹಿಳಾ ದಿನಾಚರಣೆ : ವಿವಿಧ ಸ್ಪರ್ಧೆ

ದಾವಣಗೆರೆ, ಮಾ.3- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ನಮ್ಮ ಕದಳಿ ಮಹಿಳಾ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಇದೇ ದಿನಾಂಕ 11ರ ಸೋಮವಾರ ವಿವಿಧ ಸಂಘ, ಸಂಸ್ಥೆಗಳು ಮತ್ತು ಸಮಾಜಗಳ ಸದಸ್ಯರಿಗೆ ಹಾಗೂ ಕದಳಿ ಸದಸ್ಯರಿಗೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸೌಮ್ಯ ಸತೀಶ್ (9449422357), ನಂದಿನಿ ಗಂಗಾಧರ್ (7899542949) ಅವರುಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕದಳಿ ವೇದಿಕೆಯ ಕಾರ್ಯದರ್ಶಿ ಚಂದ್ರಿಕಾ ಮಂಜುನಾಥ್ ತಿಳಿಸಿದ್ದಾರೆ.

# ನಾಳೆ ಹೆಬ್ಬಾಳು ಗ್ರಾಮದಲ್ಲಿ ತಾಲ್ಲೂಕು ಸಾಹಿತ್ಯ ಸಮ್ಮೇಳನ

**(1ನೇ ಪುಟದಿಂದ)** ಉದ್ಘಾಟಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಶ್ರೀ ರುದ್ರೇಶ್ವರ ಸ್ವಾಮಿ ವೇದಿಕೆಯನ್ನು ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಪುಸ್ತಕ ಮಳಿಗೆಯನ್ನು ಹೆಬ್ಬಾಳು ಸ್ವಾತಂತ್ರ್ಯ ಹೋರಾಟಗಾರರಾದ ರುದ್ರಮ್ಮ, ಸ್ತ್ರೀಸಕ್ತಿ-ಸ್ವಸಹಾಯ ಸಂಘಗಳ ಉತ್ಪನ್ನಗಳ ಮಳಿಗೆಗಳನ್ನು ಮಾಜಿ ಯೋಧ ಹೆಚ್.ಎನ್. ದೊರೆಸ್ವಾಮಿ ಉದ್ಘಾಟಿಸಲಿದ್ದು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ ಕುಲಸಚಿವ ಡಾ.ರಂಗಸ್ವಾಮಿ ಬಿ.ಇ. ಅವರು ಸಮ್ಮೇಳನ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಮಧ್ಯಾಹ್ನ 1 ಗಂಟೆಗೆ ಸಾಹಿತ್ಯ ಗೋಷ್ಠಿ, 2 ಗಂಟೆಗೆ ಕೃಷಿ ಗೋಷ್ಠಿ, 3 ಗಂಟೆಗೆ ಕವಿ ಗೋಷ್ಠಿ ನಡೆಯಲಿವೆ. ಸಂಜೆ 4 ಗಂಟೆಗೆ ಬಹಿರಂಗ ಅಧಿವೇಶನ ನಡೆಯಲಿದ್ದು, 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ದಾಗಿನಕಟ್ಟೆ ಪರಮೇಶ್ವರಪ್ಪ ಕೆ.ಎಸ್., ಸಿ.ಜಿ. ಜಗದೀಶ್ ಕೂಲಂಬಿ, ಷಡಾಕ್ಷರಪ್ಪ ಎಂ.ಬೇತೂರು, ಸೌಭಾಗ್ಯಮ್ಮ ಕೆ.ಜಿ., ಎಸ್.ಶಿವಯ್ಯ, ಕುರ್ಕಿ ಸಿದ್ದೇಶ್ ಇತರರಿದ್ದರು.

# ವೆನಿಸ್, ವಿಯನ್ನಾ ಮಾದರಿಯ ಚಿತ್ರಕಲಾ ಪ್ರೋತ್ಸಾಹ ಸಿಗಲಿ

**(1ನೇ ಪುಟದಿಂದ)** ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಚಿತ್ರಸಂತೆಗೆ ಭೇಟಿ ನೀಡಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಬೆಂಗಳೂರಿನಂತಹ ಊರುಗಳಲ್ಲಿ ಚಿತ್ರಕಲಾ ಸಂತೆ ನಡೆಯುತ್ತಿತ್ತು. ದಾವಣಗೆರೆಯಲ್ಲಿ ಚಿತ್ರಸಂತೆ ನಡೆದಿರುವುದು ಸಂತೋಷ ತಂದಿದೆ. ಜನರು ಚಿತ್ರಸಂತೆಗಳಲ್ಲಿ ಕಲಾಕೃತಿಗಳನ್ನು ವೀಕ್ಷಿಸುವುದಷ್ಟೇ ಅಲ್ಲದೇ ಖರೀದಿ ಮಾಡಬೇಕು ಎಂದು ಹೇಳಿದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಡಿ.ಸಿ. ಶ್ರೀನಿವಾಸ್ ಮಾತನಾಡಿ, ಪ್ರತಿ ಬಾರಿ ಕಲಾವಿದರು ಹೊಸ ಹೊಸ ಕಲಾಕೃತಿಗಳನ್ನು ಚಿತ್ರಸಂತೆಗೆ ತರುತ್ತಿದ್ದಾರೆ. ಕಲಾ ಆಸ್ವಾದನೆ, ಕಲೆ ಬೆಳೆಸಿಕೊಳ್ಳುವ ಸ್ಫೂರ್ತಿ ಹಾಗೂ ಮಾರಾಟಗಳು ಚಿತ್ರ ಸಂತೆಯಲ್ಲಿ ನಡೆಯುತ್ತಿದೆ ಎಂದರು.

ಚಿತ್ರಕಲಾ ಪರಿಷತ್ ಕಾರ್ಯಕಾರಿ ಸಮಿತಿ ಸದಸ್ಯ ಡಿ. ಶೇಷಾಚಲ ಮಾತನಾಡಿ, ವರ್ಷದಿಂದ ವರ್ಷಕ್ಕೆ ಚಿತ್ರಸಂತೆ ಹೆಚ್ಚು ಜನರನ್ನು ತಲುಪುತ್ತಿದೆ. ವಿವಿಧ ರೀತಿಯ ಕಲಾಕೃತಿಗಳು ಜನರ ಗಮನ ಸೆಳೆಯುತ್ತಿವೆ ಎಂದರು.

ಐ.ಪಿ.ಎಸ್. ಅಧಿಕಾರಿ ರವಿ ಡಿ. ಚನ್ನಣ್ಣನವರ್ ಚಿತ್ರಸಂತೆ ವೀಕ್ಷಿಸಿದರು.

ಈ ಸಂದರ್ಭದಲ್ಲಿ ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಎಂ.ಜಿ.ಈಶ್ವರಪ್ಪ, ಪರಿಷತ್ ಕಾರ್ಯಕಾರಿ ಸಮಿತಿ ಸದಸ್ಯರಾದ ಸದಾನಂದ ಹೆಗಡೆ, ರವಿ ಶ್ಯಾಮ್ ಹುದ್ದಾರ್, ಶಾಂತಯ್ಯ ಪರಡಿಮಠ, ವಿಜಯಕುಮಾರ್ ಜಾಧವ್, ಎಂ. ಅಶೋಕ್, ಗಣೇಶ್ ಆಚಾರ್, ಎಂ. ಎಸ್. ಚೇತನ್, ಬಿ. ಅಚ್ಯುತಾನಂದ, ಎ. ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.





ಚಿತ್ರಸಂತೆಯಲ್ಲಿ ಕೊಪ್ಪಳದ ಕಲಾವಿದ ವೀರಯ್ಯ ವಂಟಗೋಡಿಮಠ ಅವರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ವ್ಯಂಗ್ಯಚಿತ್ರವನ್ನು ಸ್ಥಳದಲ್ಲೇ ರಚಿಸುತ್ತಿರುವುದು.

## ಕಲೆಗೂ ಮನ್ನಣೆ ಬೇಕು

**(1ನೇ ಪುಟದಿಂದ)** ಕಲಾ ಪ್ರತಿಭೆಗಳಿಗೆ ಪ್ರೋತ್ಸಾಹಿಸುವ ದಿಸೆಯಲ್ಲಿ ಚಿತ್ರಸಂತೆ ಉತ್ತಮವಾಗಿ ಕೆಲಸ ಮಾಡುತ್ತಿದೆ. ಬೆಂಗಳೂರು, ಮೈಸೂರು ಮುಂತಾದ ದೊಡ್ಡ ನಗರಗಳಲ್ಲಿ ಮಾತ್ರ ನಡೆಯುತ್ತಿದ್ದ ಚಿತ್ರಸಂತೆ ದಾವಣಗೆರೆಗೂ ಕಾಲಿರಿಸಿರುವುದು ಉತ್ತಮ ಬೆಳವಣಿಗೆ ಎಂದರು.

ಬಾಲ್ಯದಿಂದಲೇ ಚಿತ್ರಕಲೆ ಬಗ್ಗೆ ಆಸಕ್ತಿ ಇತ್ತು. ಕಳೆದ ನಾಲ್ಕು ವರ್ಷಗಳಿಂದ ವೃತ್ತಿಪರ ಹಂತದಲ್ಲಿ ಚಿತ್ರಕಲೆ ಅಭ್ಯಾಸ ಮಾಡುತ್ತಿದ್ದೇನೆ. ಚಿತ್ರಸಂತೆಯಲ್ಲಿ ಹೆಚ್ಚು ಜನರು ಕಲಾಕೃತಿ ವೀಕ್ಷಿಸುವುದರಿಂದ ಇನ್ನಷ್ಟು ಉತ್ಸಾಹ ದೊರೆ ತಿದೆ ಎಂದು ಪ್ರಿಯಾ ನಲ್ಲೂರು ಹೇಳಿದರು.

## ನಗರದಲ್ಲಿ ಬಿಸಿಲ ನಡುವೆಯೂ ರಸಿಕರ ಮನ ಸೆಳೆದ ಚಿತ್ರಸಂತೆ

ದಾವಣಗೆರೆ, ಮಾ. 3 - ನಗರದ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ದಾವಣಗೆರೆ ಚಿತ್ರಕಲಾ ಪರಿಷತ್ ವತಿಯಿಂದ ಆಯೋಜಿಸಲಾಗಿದ್ದ ಒಂದು ದಿನದ ಚಿತ್ರಸಂತೆಯಲ್ಲಿ ಬಾಲಕರಿಂದ ಹಿಡಿದು ನುರಿತ ಕಲಾವಿದವರೆಗೆ ನೂರಾರು ಕಲಾವಿದರು ವಿಧ ವಿಧದ ಕಲಾಕೃತಿಗಳ ಪ್ರದರ್ಶನ ನೆರವೇರಿಸಿದರು.

ಹೊಳಲ್ಕೆರೆಯ ಅರೆಹಳ್ಳಿಯ ಸ್ನೇಹ ಪಬ್ಲಿಕ್ ಸ್ಕೂಲ್‌ನ 6ನೇ ತರಗತಿ ಬಾಲಕ ರಾಘವ್ ಅವರು ಚಿತ್ರದಲ್ಲೇ ಕೃತಿ ರಚಿಸುವಲ್ಲಿ ತೊಡಗಿದ್ದರು. ಬೆಂಗಳೂರಿನ ಬಸ್ ಚಾಲಕ ರವೀಶ್ ಅವರು ತೆಂಗಿನ ಕಾಯಿಯಲ್ಲಿ ಸ್ಥಳದಲ್ಲೇ ಹಲವಾರು ಕೃತಿಗಳನ್ನು ರಚಿಸುತ್ತಿದ್ದರು.

ನಗರದ ಕೆ. ಮುತ್ತಪ್ಪ ಕುಂಬಾರ್ ಅವರು ಮಣ್ಣಿನಲ್ಲಿ ಕಲಾಕೃತಿಗಳನ್ನು ಅರಳಿಸಿದ್ದರೆ, ಮಲೇಬೆನ್ನೂರಿನ ಡಿ. ಕುಮಾರ್ ಅವರು ಕಟ್ಟಿಗೆಗಳಲ್ಲಿ ಕೃಷಿ ಪರಿಕರಗಳನ್ನು ರೂಪಿಸಿದ್ದರು.

ಹರಿಹರದ ಚಿತ್ರ ಶಿಕ್ಷಕ ಬಿ. ರೇವಣಸಿದ್ದಪ್ಪ ಅವರು ಸ್ಪ್ರೆಡ್ ಮೆಥಡ್ ಮೂಲಕ ರಚಿಸಿದ ಚಿತ್ರಗಳನ್ನು ಮಾರಾಟಕ್ಕೆ ತಂದಿದ್ದರು. ಬಣ್ಣ ಹರಡುವ ಮೂಲಕ ಚಿತ್ರ ರೂಪಿಸಬೇಕಿದ್ದು, ಒಂದು ಬಾರಿ ಬಣ್ಣ ಬಳಸಿದ ನಂತರ ಎಂಟು ನಿಮಿಷಗಳಲ್ಲೇ ಇಡೀ ಚಿತ್ರ ಪೂರೈಸಬೇಕು ಎಂದವರು ಹೇಳಿದರು.

ಹರಿಹರದ ಜಿ.ಎಸ್. ಕೃಷ್ಣ ಅವರು ಸೆಮಿ ಮಾಡರ್ನ್ ಚಿತ್ರ ರೂಪಿಸುವಲ್ಲಿ ತೊಡಗಿದ್ದರು. ಬಣ್ಣವನ್ನು ಭಿತ್ತಿಗೆ ಮೆತ್ತುವ ಮೂಲಕ ಕಲಾಕೃತಿ ರೂಪಿಸುತ್ತಿದ್ದ ಅವರು, ಪ್ರತಿ ಕೃತಿ ರೂಪಿಸಲು ಹತ್ತರಿಂದ ಹದಿನೈದು ದಿನಗಳು ಬೇಕಾಗುತ್ತವೆ ಎಂದು ಹೇಳಿದರು.

ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಚಿತ್ರಸಂತೆಯು ಪುಟ್ಟ ಮಕ್ಕಳು, ವಿದ್ಯಾರ್ಥಿಗಳಿಂದ ಹಿಡಿದು ಹಿರಿಯವರೆಗೆ ನೂರಾರು ಜನರನ್ನು ಆಕರ್ಷಿಸಿತು.

ಜನರು ದೊಡ್ಡ ಸಂಖ್ಯೆಯಲ್ಲಿ ಬಂದರೂ ಸಹ ಖರೀದಿಸುವುದು ಕಡಿಮೆ ಎಂದು ಕೆಲ ಕಲಾವಿದರು ತಿಳಿಸಿದರು. ಕಲಾ ಆಸ್ವಾದನೆಗೆ ಜನರು ಬರುವುದೇ ನಮಗೆ ಸ್ಫೂರ್ತಿ ಎಂದು ಇನ್ನೂ ಕೆಲ ಕಲಾವಿದರು ಅಭಿಪ್ರಾಯ ಪಟ್ಟರು.

ಬಿಸಿಲಿನ ತಾಪದ ನಡುವೆಯೂ ಸಾಕಷ್ಟು ಕಲಾರಸಿಕರು ಚಿತ್ರಸಂತೆಗೆ ಆಗಮಿಸಿ ವರ್ಣಮಯ ಚಿತ್ತಾರಗಳನ್ನು ತಮ್ಮ ಮನಸ್ಸು ಹಾಗೂ ಹೃದಯಗಳಲ್ಲಿ ತುಂಬಿಕೊಳ್ಳುತ್ತಿದ್ದುದು ಕಂಡು ಬಂತು.

## ಅಶ್ವದಲ್ಲೇ ಸೌಂದರ್ಯ, ಸಂಯೋಗವೇ ಪಾವಿತ್ರ್ಯತೆ



ರವಿ ಕಾಣದ್ದನ್ನು ಕವಿ ಕಂಡ ಎಂಬ ಮಾತಿದೆ. ಕವಿಯೂ ಕಾಣದ್ದನ್ನೂ ಕಲಾವಿದ ಕಾಣಬಲ್ಲ ಎಂಬುದಕ್ಕೆ ಚಿತ್ರದುರ್ಗದ ಚಿತ್ರಕಲಾವಿದ ಟಿ.ಎಂ. ವೀರೇಶ್ ಅವರ 'ಸೇಕ್ರೆಡ್ ಯೂನಿಯನ್' ಚಿತ್ರ ಸಾಕ್ಷಿಯಾಗಿತ್ತು.

ಖಜುರಾಹೋದ ದೇವಾಲಯಗಳಲ್ಲಿರುವ ಮಿಲನ ಶಿಲ್ಪಗಳಿಂದ ಸ್ಫೂರ್ತಿ ಪಡೆದು, ಆ ದೃಶ್ಯಗಳನ್ನು ಕುದುರೆಯಲ್ಲಿ ಬಿಂಬಿಸುವ ಮೂಲಕ ವೀರೇಶ್ ಸೇಕ್ರೆಡ್ ಯೂನಿಯನ್ (ಸಂಯೋಗವೇ ಪಾವಿತ್ರ್ಯ) ಎಂಬ ಚಿತ್ರ ರಚಿಸಿದ್ದರು.

ಖಜುರಾಹೋ ದೇವಾಲಯದಲ್ಲಿ ಮಿಥುನ ಶಿಲ್ಪಗಳಿವೆ. ಸ್ತ್ರಿ - ಪುರುಷರ ಸಂಯೋಗ ಪವಿತ್ರ ಎಂದು ಈ ದೇವಾಲಯ ಸಂದೇಶ ನೀಡುತ್ತಿದೆ. ಅದೇ ಸಂದೇಶವನ್ನು ಸ್ಫೂರ್ತಿ ಹಾಗೂ ಸೌಂದರ್ಯದ ಸಂಕೇತವಾದ ಕುದುರೆಯ ಮೇಲೆ ರಚಿಸಿದ್ದೇನೆ ಎಂದವರು ಹೇಳುತ್ತಾರೆ.

ಈ ಚಿತ್ರಗಳಲ್ಲಿ ಪುರುಷ ಪ್ರಜ್ಞೆ ಹಾಗೂ ಸ್ತ್ರೀ ಶಕ್ತಿಗಳನ್ನು ಬಿಂಬಿಸಿದ್ದೇನೆ. ಸೃಷ್ಟಿ ಇರುವವರೆಗೂ ಗಂಡು ಹೆಣ್ಣಿನ ಆಕರ್ಷಣೆ ಇದ್ದೇ ಇರುತ್ತದೆ.

ಈ ಆಕರ್ಷಣೆಯನ್ನು ಕುದುರೆಯ ಹಿನ್ನೆಲೆಯಿಂದ ಸಶಕ್ತವಾಗಿ ಬಿಂಬಿಸಬಹುದು ಎಂದವರು ಅಭಿಪ್ರಾಯಪಡುತ್ತಾರೆ.

ನನಗೆ ಬಾಲ್ಯದಿಂದಲೂ ಕುದುರೆಯ ಬಗ್ಗೆ ಅಪಾರ ಆಕರ್ಷಣೆ. ಈ ಬಾರಿ 'ಕುದುರೆ ಮತ್ತು ಸ್ತ್ರೀ' ಎಂಬ ಸರಣಿಯ ಚಿತ್ರಗಳನ್ನು ಪ್ರದರ್ಶನಕ್ಕೆ ತಂದಿದ್ದೇನೆ ಎಂದು ವೀರೇಶ್ ತಿಳಿಸಿದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas



॥ ನಮಃ ಸದ್ಯೋಜಾತ ಗುರುವರ್ಯಃ ॥

ಅಖಿಲ ಭಾರತ ಶಿವಾಚಾರ್ಯ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರೂ ಹಾಗೂ
ದಾವಣಗೆರೆ ಹಿರೇಮಠದ ಸ್ಥಿರಪಟ್ಟಾಧ್ಯಕ್ಷರೂ ಆದ

## ಶ್ರೀ ಷ.ಬ್ರ. ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಇವರ

# 16ನೇ ಸಂಸ್ಮರಣೋತ್ಸವದ ಆಹ್ವಾನ ಪತ್ರಿಕೆ



**ದಿನಾಂಕ : 04-03-2023, ಸೋಮವಾರ ಸಂಜೆ 6-30 ಗಂಟೆಗೆ**

**ಸ್ಥಳ :** ಶ್ರೀ ಷ॥ ಬ್ರ॥ ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ
(ಶಿವಾಚಾರ್ಯ ನಿಕೇತನ) ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

**ಸಾನ್ನಿಧ್ಯ :**

ಶ್ರೀ ಷ. ಬ್ರ. ರೇಣುಕ ಶಿವಾಚಾರ್ಯ ಮಹಾಸ್ವಾಮಿಗಳು, ಎಡೆಯೂರು ಕ್ಷೇತ್ರ, ಎಡೆಯೂರು.
ಶ್ರೀ ಷ. ಬ್ರ. ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ಕಬ್ಬಿಣಕಂಥಿ ಮಠ, ರಟ್ಟೀಹಳ್ಳಿ.
ಶ್ರೀ ಷ. ಬ್ರ. ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಕಲ್ಮಠ, ಹೊನ್ನಾಳಿ.

**ಅಧ್ಯಕ್ಷತೆ :**

ಡಾ. ಶಾಮನೂರು ಶಿವಶಂಕರಪ್ಪನವರು, ಶಾಸಕರು ಹಾಗೂ ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.

**ಉಪನ್ಯಾಸ :**

ವಿಷಯ : ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು
ಶ್ರೀ ವಿಜಯಕುಮಾರ್ ಹೆಚ್.ಜಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ
ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

**ಮುಖ್ಯ ಅತಿಥಿಗಳು :**

ಡಾ. ಅಥಣಿ ಎಸ್. ವೀರಣ್ಣ
ಖ್ಯಾತ ಲೆಕ್ಕ ಪರಿಶೋಧಕರು, ಕೈಗಾರಿಕೋದ್ಯಮಿಗಳು
ಹಾಗೂ ಅಧ್ಯಕ್ಷರು,
ಬಾಪೂಜಿ ಎಂ.ಬಿ.ಎ. ಕಾಲೇಜ್, ದಾವಣಗೆರೆ.

ಶ್ರೀ ಬಿ. ಸಿ. ಉಮಾಪತಿ
ಖ್ಯಾತ ವರ್ತಕರು ಹಾಗೂ
ಸದಸ್ಯರು, ಆಡಳಿತ ಮಂಡಳಿ
ದಾವಣಗೆರೆ.

**ಪ್ರಾರ್ಥನೆ :** ಶ್ರೀಮತಿ ವಿಜಯ ಹಿರೇಮಠ, ದಾವಣಗೆರೆ ಹಾಗೂ ಶ್ರೀ ಗುರು ಪಂಚಾಕ್ಷರ ಸಂಗೀತ ವಿದ್ಯಾಲಯದ ವಿದ್ಯಾರ್ಥಿ ವೃಂದದಿಂದ, ದಾವಣಗೆರೆ

**ಸಂಗೀತ :** ಶ್ರೀಮತಿ ಡಿ.ಆರ್. ಕೃಷ್ಣವೇಣಿ, ವಾಸವಿ ಯುವತಿಯರ ಭಜನಾ ಮಂಡಳಿ, ದಾವಣಗೆರೆ.

**ಕಾರ್ಯಕ್ರಮದ ನಂತರ ಪ್ರಸಾದ ವ್ಯವಸ್ಥೆ ಇರುತ್ತದೆ**

# 'ಲಕ್ಷ್ಮೀ ಟಿಫನ್ ರೂಮ್' ಧಾರಾವಾಹಿಯ ನಾಯಕ ನಟನಾಗಿ ದಾವಣಗೆರೆ ವಚನ್ ಹೊಸಮಠ್



ದಾವಣಗೆರೆ ನಗರದ ಯುವ ಪ್ರತಿಭೆ **ವಚನ್ ಹೊಸಮಠ್** ಸುವರ್ಣ ವಾಹಿನಿಯ ಹೊಸ ಧಾರಾವಾಹಿ **'ಲಕ್ಷ್ಮೀ ಟಿಫನ್ ರೂಮ್'**ನ ನಾಯಕ ನಟನಾಗಿ ಅಭಿನಯಿಸಿರುವ ಇವರು ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರ್ ವಿದ್ಯಾರ್ಥಿಯಾಗಿ ಪ್ರಥಮ ವರ್ಷದಲ್ಲಿ **"ಮಿಸ್ಟರ್ ಬಿಐಇಟಿ ಫ್ರೆಷರ್"** ಆಗಿ ಅಂತಿಮ ವರ್ಷದಲ್ಲಿ **"ಮಿಸ್ಟರ್ ಬಿಐಇಟಿ"** ಪ್ರಶಸ್ತಿ ಪಡೆದಿರುತ್ತಾರೆ. 2022 ರಲ್ಲಿ **"ಮಿಸ್ಟರ್ ದಾವಣಗೆರೆ"** ಫ್ಯಾಷನ್ ಷೋನಲ್ಲಿ ರನ್ನರ್ ಪ್ರಶಸ್ತಿ ಪಡೆದಿರುತ್ತಾರೆ. ಹಲವಾರು ರ್‍ಯಾಂಪ್ ವಾಕ್‌ಗಳಲ್ಲಿ ಸ್ಪರ್ಧಿಸಿ, ಕೆಲವು ರ್‍ಯಾಂಪ್ ವಾಕ್‌ಗಳಲ್ಲಿ ಜ್ಯೂರಿಯಾಗಿ ಕಾರ್ಯನಿರ್ವಹಿಸಿದ್ದಾರೆ. ನಂತರ ಅಭಿನಯದ ತರಬೇತಿ ಪಡೆದು ಹಲವು ನಾಟಕಗಳಲ್ಲಿ, ಅಲ್ಬಮ್ ಸಾಂಗ್ ಗಳಲ್ಲಿ, ಕಿರುಚಿತ್ರಗಳಲ್ಲಿ ನಟಿಸಿ ಯಶಸ್ಸು ಪಡೆದ ಬಹುಮುಖ ಪ್ರತಿಭೆ **ವಚನ್ ಹೊಸಮಠ್‌ರವರು** ಒಬ್ಬ ಉತ್ತಮ ಭರವಸೆಯ ನಟನಾಗಿ ಬೆಳೆಯಲಿ, ಚಿತ್ರರಂಗದಲ್ಲಿ ಉಜ್ವಲ ಭವಿಷ್ಯ ಹೊಂದಲಿ. **"ಲಕ್ಷ್ಮೀ ಟಿಫನ್ ರೂಮ್"** ಧಾರಾವಾಹಿಗೆ ನಿಮ್ಮೆಲ್ಲರ ಪ್ರೀತಿಯ ಆಶೀರ್ವಾದ ಇರಲಿ, ಎಂದು ಹಾರೈಸಿ

**ಶುಭ ಕೋರುವವರು :**

- ಡಾ॥ ಬಿ.ಎಸ್. ನಾಗಪ್ರಕಾಶ್
- ಅಂಬರ್‌ಕರ್ ಮದನ್‌ಕುಮಾರ್
- ಎನ್.ವಿ. ಬಂಡಿವಾಡ
- ಸುರಭಿ ಶಿವಮೂರ್ತಿ
- ವಾಲಿ ರವಿಶಂಕರ್
- ಮಂಜುನಾಥ್ ಸಿ.ಎ
- ಎಸ್.ಕೆ.ಶಿವಕುಮಾರ್
- ಟಿ.ಎಂ.ಪಂಚಾಕ್ಷರಯ್ಯ
- ಜಂಬಿಗಿ ರಾದೇಶ್
- ಉಮಾಪತಯ್ಯ. ಸಿ.ಎ
- ನಿರಂಜನ್ ನಿಶಾನಿಮಠ್
- ಸತ್ಯನಾರಾಯಣ ಎಂ.ವಿ.
- ಬಸವರಾಜ್ ಎನ್.ಸಿ.
- ಆರ್.ಟಿ. ಅರುಣ್‌ಕುಮಾರ್
- ಅಂದನೂರ್ ನಾಗರಾಜ್
- ಪ್ರತಾಪ್. ಎ.ಬಿ.
- ಈಶ್ವರಿ ಶಿವಕುಮಾರ್
- ಸಂತೋಷ್ ಕುಮಾರ್. ಬಿ
- ಮನೋಹರ್
- ಮಲ್ಲಿಕಾರ್ಜುನ ಗಾಂಧಿ
- ಆರ್.ಟಿ.ಮೃತ್ಯುಂಜಯ
- ಎಂ.ಜಿ. ಜಗದೀಶ್



Star ಸುವರ್ಣ

ಸಂಜೆ 6.30

**ಹೆಚ್. ವಿ. ಮಂಜುನಾಥಸ್ವಾಮಿ ಹೊಸಮಠ್**
**ಮತ್ತು ಶ್ರೀಮತಿ ಜ್ಯೋತಿ ಹೊಸಮಠ್**

**ವಾಯುವಿಹಾರ ಮತ್ತು ಚಿಂತನ ಮಂಥನ ಬಳಗ**
**ಹ್ಯಾಪಿ ಫ್ರೆಂಡ್ಸ್ ಕ್ಲಬ್ ಮತ್ತು ಸ್ನೇಹ ಬಳಗ,**

# ಸಮತೆ ಸಾರಿದ ಗುರು ಕೊಟ್ಟೂರೇಶ್ವರರು

ಭಾರತ ಪುಣ್ಯ ಭೂಮಿ. ಇಲ್ಲಿ ಅನೇಕ ವ್ಯಕ್ತಿಗಳು ಜನಿಸಿ, ತಮ್ಮ ಸಮಾಜ ಮುಖಿ ಕಾರ್ಯಗಳಿಂದ ಜನರ ಮಾನಸದಲ್ಲಿ ಅಳಿಯದೇ ಉಳಿದು ಮಹಾತ್ಮರಾಗಿದ್ದಾರೆ, ಪುಣ್ಯ ಪುರುಷರಾಗಿದ್ದಾರೆ. ಕಾಲಾನಂತರ ಜನರ ಭಕ್ತಿಯ ಪ್ರತೀಕವಾಗಿ ಅವತಾರ ಪುರುಷರಾಗಿ ಅಜರಾಮರರಾಗಿ ಉಳಿದಿದ್ದಾರೆ. ಇಂತಹ ಅವತಾರ ಪುರುಷರಲ್ಲಿ ಪಂಚಗಣಾಧೀಶ್ವರಲ್ಲಿ ಒಬ್ಬರಾದ ಶ್ರೀ ಕೊಟ್ಟೂರೇಶ್ವರ ಸ್ವಾಮಿಯೂ ಸಹಾ ಒಬ್ಬರು.



ವ್ಯಕ್ತಿ ತನಗಾಗಿ, ತನ್ನ ಕುಟುಂಬಕ್ಕಾಗಿ, ಸ್ವಾರ್ಥಕ್ಕಾಗಿ ಬದುಕಿದರೆ ಅವನಿಗೆ ಅದೇ ಜನ್ಮ ಕೊನೆ. ಕೆಲವರು ಜೀವಂತವಾಗಿದ್ದಾಗಲೇ ಜನರ ದೃಷ್ಟಿಯಿಂದ ಸತ್ತಂತೆ ಇರುತ್ತಾರೆ. ಆದರೆ ಪರರಿಗಾಗಿ, ಪರರ ನೋವಿಗಾಗಿ, ನೊಂದವರ ನೋವಿನ ಕಣ್ಣೀರನ್ನು ಒರೆಸಲು ಪ್ರಯತ್ನಿಸಿದ ವ್ಯಕ್ತಿ ಅಜರಾಮರರಾಗಿ ಅಳಿಯದೇ ಉಳಿದುಬಿಡುತ್ತಾರೆ. ಅವರು ದೈಹಿಕವಾಗಿ ಇಲ್ಲವಾದರೂ ಅವರ ಹೆಸರು ಜನರ ಉಸಿರು ಉಸಿರಿನಲ್ಲೂ ಅಳಿಯದೇ ಚಿರಸ್ಥಾಯಿಯಾಗಿಬಿಡುತ್ತದೆ.

ಪಂಚಗಣಾಧೀಶ್ವರರಲ್ಲಿ ಒಬ್ಬರಾದ ಕೊಟ್ಟೂರೇಶ್ವರರು ಕಷ್ಟದಲ್ಲಿರುವ ವ್ಯಕ್ತಿಗಳಿಗೆ ಸ್ಪಂದಿಸಿ, ಅವರ ನೋವನ್ನು ನಿವಾರಿಸಲು ಶ್ರಮಿಸಿದ ಮಹಾತ್ಮ, ಇವರು ಜಾತಿಗೆ ಅಂಟಿಕೊಳ್ಳದೇ ಜೀವ ಪ್ರೀತಿಗೆ ಅಂಟಿಕೊಂಡು ಮನಜರೆಲ್ಲರನ್ನೂ ಪ್ರೀತಿ ಯಿಂದ ಅಪ್ಪಿಕೊಂಡಿದ್ದಾರೆ. ತಪ್ಪು ಮಾಡಿದ ವ್ಯಕ್ತಿ ಗಳನ್ನು ದಂಡನೆಗೆ ಗುರಿ ಮಾಡಿ ಶಿಕ್ಷಿಸದೇ, ಅವರನ್ನು ತಪ್ಪಿನ ಅರಿವಿನ ಬೆಳಕನ್ನು ನೀಡಿ ಉದ್ಧರಿಸಿದ್ದಾರೆ. ಇಂತವರಲ್ಲಿ ಮುಸ್ಲಿಂ ದೊರೆಯಾದ ಅಕ್ಬರ್ ಮಹಾ ರಾಜನು ಇವರ ಶಕ್ತಿಗೆ ಮಣಿದು ಮಣಿಮಂಚವನ್ನು ನೀಡಿದ್ದಾನೆ. ಅದು ಇಂದಿಗೂ ಗಚ್ಚಿನ ಮಠದಲ್ಲಿ ವಿರಾಜಮಾನವಾಗಿ ಉಳಿದಿದೆ. ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ಕುಷ್ಟರೋಗದಿಂದ ಬಳಲು ತ್ತಿರುವ ವ್ಯಕ್ತಿಯನ್ನು ಪ್ರೀತಿಯಿಂದ ಉಪಚರಿಸಿದ ಇವರ ಮಾತೃವಾತ್ಸಲ್ಯ ಮರೆಯುವಂತಿಲ್ಲ.

ಈಗಿನ ಕೊಟ್ಟೂರಿಗೆ ಮೊದಲಿದ್ದ ಹೆಸರು ಶಿಖಾಪುರ. ಶ್ರೀ ಕೊಟ್ಟೂರೇಶ್ವರರು ಶಿಖಾಪುರದಲ್ಲಿ ನೆಲೆಸಿ ಜನರು ಬೇಡಿದ ವರಗಳನ್ನು ಕೊಡುವ ಊರು ಕೊಟ್ಟೂರು ಆಗಿದೆ ಎನ್ನುತ್ತಾರೆ. ಶ್ರೀ ಕೊಟ್ಟೂರೇಶ್ವರ ಸ್ವಾಮಿಯು ಊರೂರು ಸಂಚರಿಸುತ್ತಾ, ಶಿಖಾಪುರಕ್ಕೆ ಬಂದಾಗ ರಾತ್ರಿ ಸಮಯವಾದ್ದರಿಂದ ಆಗ ಶಿಖಾಪುರದಲ್ಲಿ ನೆಲೆಸಿದ್ದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಬಳಿ ಬಂದು ತಂಗಲು ಸ್ವಲ್ಪ ಸ್ಥಳವನ್ನು ಕೇಳಲಾಗಿ, ಶ್ರೀ ವೀರಭದ್ರೇಶ್ವರರು ತಮ್ಮ ಆಸ್ಥಾನದಲ್ಲಿ ಮಲಗಲು ಸ್ಥಳವನ್ನು ನೀಡುತ್ತಾರೆ. ಬೆಳಗಾಗುವ ಹೊತ್ತಿಗೆ ಸಂಪೂರ್ಣವಾಗಿ ಆಸ್ಥಾನವನ್ನು ಆವರಿಸಿ, ನನಗೆ ಸ್ಥಳ ವಿಲ್ಲದಾಗಿದೆ ಎಂದು ಶ್ರೀ ವೀರಭದ್ರ ಸ್ವಾಮಿ ಕೊಟ್ಟೂರೇಶ್ವರ ಸ್ವಾಮಿಯನ್ನು ಕೇಳಲಾಗಿ, ನಿನ್ನ ಸ್ಥಳವನ್ನು ನನಗೆ ಕೊಡು, ನೀನು ಕೊಡದಗುಡ್ಡಕ್ಕೆ ಹೋಗಿ ನೆಲೆಸು ಹಾಗು ಆ ಸ್ಥಳವನ್ನು ಯಾರಿಗೂ ಕೊಡಬಾರದು. ಆ ಕ್ಷೇತ್ರವು ಕೊಡದಗುಡ್ಡ ಎಂದು ಪ್ರಖ್ಯಾತವಾಗುತ್ತದೆ. ನೀನು ನನಗೆ ಸ್ಥಳ ಕೊಟ್ಟ ಕಾರಣ ಈ ಶಿಖಾಪುರ ಮುಂದೆ ಕೊಟ್ಟೂರು ಎಂದು ಪ್ರಖ್ಯಾತವಾಗಲಿ ಎಂದು ಹರಿಸಿದರಂತೆ. ಅಂದಿನಿಂದ ಶಿಖಾಪುರ ಕೊಟ್ಟೂರಾಗಿ ಪ್ರಖ್ಯಾತವಾಗಿದೆ.



ಶ್ರೀ ಕೊಟ್ಟೂರೇಶ್ವರರು ಜನರ ನೋವುಗಳಿಗೆ, ದು:ಖಗಳಿಗೆ, ಕಷ್ಟಗಳಿಗೆ ಸ್ಪಂದಿಸಿ ಅವರಿಗೆ ಸಹಾಯ ಹಸ್ತವನ್ನು ನೀಡಿ ಅವರ ಭಯವನ್ನು ನಿವಾರಿಸಿ ಅಭಯವನ್ನು ನೀಡುತ್ತಾ, ಸನ್ಮಾರ್ಗದಲ್ಲಿ ನಡೆಯುವಂತೆ ಜನರಿಗೆ ಧರ್ಮ ಮಾರ್ಗವನ್ನು ತೋರಿಸಿದ್ದರಿಂದ ಜನರ ಮನದಲ್ಲಿ ಅವರು ಶಾಶ್ವತವಾಗಿ ಉಳಿದಿದ್ದಾರೆ. ಜನರಲ್ಲಿ ಭೇದವನ್ನು ಎಣಿಸದೇ ಎಲ್ಲರನ್ನೂ ಪ್ರೀತಿಯಿಂದ ನೋಡುತ್ತಾ, ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತಾ ಬಂದಿದ್ದರಿಂದ ಕಾಲಾನಂತರ ಜನರು ಅವರಿಗೆ ಭಕ್ತಿಭಾವದಿಂದ ಕೃತಜ್ಞತೆಯನ್ನು ಅರ್ಪಿಸುತ್ತಾ ಬಂದು, ಮುಂದೆ ಪವಾಡ ಪುರುಷರಾಗಿ ಶಾಶ್ವತವಾಗಿ ಉಳಿದಿದ್ದಾರೆ. ಇಂತಹ ಮಹಾಮಹಿಮರ ಜಾತ್ರಾ ಮಹೋತ್ಸವಕ್ಕೆ ನೂರಾರು ಕಿ.ಮೀ. ದೂರದ ಊರುಗಳಿಂದ ಸುಡು ಬಿಸಿಲನ್ನೂ ಲೆಕ್ಕಿಸದೇ ಜನರು ಪಾದಯಾತ್ರೆಯ ಮೂಲಕ ದೇಹವನ್ನು ದಂಡಿಸುತ್ತಾ, ಹರ್ಷದಿಂದ ತಮ್ಮ ಭಕ್ತಿಯ ಸೇವೆಯನ್ನು ಅರ್ಪಿಸುತ್ತಿದ್ದಾರೆ. ಕೊರೊನಾ ನಿಮಿತ್ಯ ಪಾದಯಾತ್ರಿಗಳಿಗೆ ಕ್ಷೇತ್ರಕ್ಕೆ ಬಾರದಂತೆ ಸಾಕಷ್ಟು ಪ್ರಚಾರ ನೀಡಿದ್ದರೂ ಸಹಾ ಭಕ್ತಿಯಲ್ಲಿ ಮಿಂದೆದ್ದ ಜನ ಪ್ರತಿವರ್ಷ ಬರುವುದಾಗಿ ಹರಕೆ ಹೊತ್ತಿದ್ದೇವೆ, ಬಾರದೇ ಇದ್ದರೆ ಹರಕೆ ಅಪೂರ್ಣವಾಗುತ್ತದೆ ಎನ್ನುವ ಕಾರಣಕ್ಕೆ ಬಂದಿದ್ದೇವೆ ಎಂದು ಪಾದಯಾತ್ರಿಗಳು ಹೇಳುವುದನ್ನು ನೋಡಿದರೆ ಭಕ್ತರಲ್ಲಿ ಭಕ್ತಿಗೆ ಬರ ಇಲ್ಲವೆಂಬಂತೆ ಪಾದ ಯಾತ್ರೆಯ ಮೂಲಕ ಆಗಮಿಸುತ್ತಿರುವುದು, ದಾರಿಯ ಉದ್ದಗಲಕ್ಕೂ ಪ್ರತಿಯೊಂದು ಊರುಗಳಲ್ಲಿ ಅವರಿಗೆ ಪ್ರಸಾದ, ಕುಡಿಯುವ ನೀರು, ಎಳೆನೀರು, ಮಜ್ಜಿಗೆ, ಹಣ್ಣು ಹಂಪಲು ನೀಡಿ ಸತ್ಕರಿಸುವುದು ನಾಡಿನ ಸಂಸ್ಕೃತಿಯನ್ನು ತೋರಿಸುತ್ತಿದೆ. ದಣಿದ ಭಕ್ತರಿಗೆ, ಸಂಕಷ್ಟದಲ್ಲಿರುವ ಜನರಿಗೆ ಶ್ರೀ ಕೊಟ್ಟೂರೇಶ್ವರರು ಮುಂದಿನ ದಿನಗಳಲ್ಲಿ ಸಕಾಲದಲ್ಲಿ ಮಳೆ ಬೆಳೆಯನ್ನು ನೀಡಿ, ಕೊರೊನಾ ಸಂಕಷ್ಟವನ್ನು ಪರಿಹರಿಸಲಿ ಎಂದು ಭಿನ್ನವಿಸುತ್ತೇನೆ.

ಹೆತ್ತ ತಾಯಿಯನ್ನು ಮನೆಯಲ್ಲಿ ಬಿಟ್ಟು ಹೋಗುವ, ಇಲ್ಲವೇ ವೃದ್ಧಾಶ್ರಮಕ್ಕೆ ದೂಡುವ ಇಂದಿನ ನಾವೆಲ್ಲಿ, ಮಕ್ಕಳಿಲ್ಲೆಂದು ಕೊರಗುತ್ತಿದ್ದ ನೆಂಬಕ್ಕನಿಗೆ ಸ್ವತ: ಮಗನಾಗಿ, ಮಕ್ಕಳಿಲ್ಲ ಎನ್ನುವ ನೋವನ್ನೂ ನೀಗಿಸಿ ಆ ತಾಯಿಯ ಮುಖದಲ್ಲಿ ಸಂತೋಷವನ್ನು ತಂದ ಕೊಟ್ಟೂರೇಶ್ವರರು ಶ್ರೇಷ್ಠರಾಗುತ್ತಾರೆ.

ಸಂತರು, ಶರಣರು ಈ ಲೋಕದ ಕಣ್ಣಿಗೆ ಹುಚ್ಚರಂತೆ ಕಾಣುತ್ತಿರುತ್ತಾರೆ. ಏಕೆಂದರೆ ಅವರು ಅಂತರ್ಮುಖಿಗಳಾಗಿ ಚಿಂತಿಸುತ್ತಾ, ಲೋಕದ ನೋವನ್ನು ಕಳೆಯುತ್ತಿರುತ್ತಾರೆ. ಅದೇ ರೀತಿ

ಶ್ರೀ ಕೊಟ್ಟೂರೇಶ್ವರರು ಸಹಾ ಜನರ ದೃಷ್ಟಿಯಲ್ಲಿ ಹುಚ್ಚರಂತೆ ಕಂಡುಬಂದು, ಜನರಲ್ಲಿನ ಮೋಹದ, ಲೋಭದ, ಕಾಮದ ಹುಚ್ಚನ್ನು ಬಿಡಿಸುವ ವೈದ್ಯರಾಗಿ ಕಂಗೊಳಿಸಿದ್ದಾರೆ.

ಭಕ್ತರು ಭಕ್ತಿಯ ಭರದಲ್ಲಿ ಕೊರೊನಾ ರೋಗದ ಬಗ್ಗೆ ಮರೆಯಬಾರದು. ಅದು ತಂದು ಒಡ್ಡಿದ ಸಾವು-ನೋವಿನ ದಿನಗಳ ಬಗ್ಗೆ ಮೈಮರೆತು ಎಚ್ಚರ ತಪ್ಪಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಆದ್ದರಿಂದ ಭಕ್ತರು ಈ ಬಗ್ಗೆ ಅಗತ್ಯ ಎಚ್ಚರಿಕೆಯನ್ನು ಕೈಗೊಂಡು ಸಹಕರಿಸಬೇಕೆಂಬುದೇ ನಮ್ಮ ಮನವಿ.

**- ಸಿ.ಮ. ಗುರುಬಸವರಾಜ**
ಹವ್ಯಾಸಿ ಬರಹಗಾರರು

# ರಾಣೇಬೆನ್ನೂರು: ಅಗಲಿದ ನಾಯಕ ಶಿವರಾಂಗೆ ಸಭಾದಿಂದ ದೀಪ ನಮನ



ರಾಣೇಬೆನ್ನೂರು, ಮಾ.3- ನಗರದ ಡಾ.ಬಿ.ಆರ್. ಅಂಬೇಡ್ಕರ್ ಸೇವಾ ಸಂಸ್ಥೆ ಹಾಗೂ ಛಲವಾದಿ ಮಹಾಸಭಾ ವತಿಯಿಂದ ಮಾಜಿ ಅಧಿಕಾರಿ, ಚಲನಚಿತ್ರ ನಟ ಹಾಗೂ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಸಂಸ್ಥಾಪಕರು ಮತ್ತು ಅಧ್ಯಕ್ಷರೂ ಆದ ಕೆ.ಶಿವರಾಂರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ದೀಪ ಬೆಳಗಿಸಿ ಅಗಲಿದ ನಾಯಕನಿಗೆ ಗೌರವ ಸಮರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಹಾವೇರಿ ಜಿಲ್ಲಾ ಛಲವಾದಿ ಮಹಾಸಭಾದ ಅಧ್ಯಕ್ಷ ಮಲ್ಲೇಶಪ್ಪ ಮದ್ಲೇರ್ ಮಾತನಾಡಿ, ಕೆ.ಶಿವರಾಂ ಬಹುಮುಖ ಪ್ರತಿಭೆಯುಳ್ಳ ಮಹಾನ್ ನಾಯಕರು. ಅವರು ಕನ್ನಡದಲ್ಲಿ ಪ್ರಥಮ ಬಾರಿಗೆ ಐ.ಎ.ಎಸ್ ಪರೀಕ್ಷೆ ಪಾಸು ಮಾಡಿ ಕನ್ನಡಕ್ಕೆ ಮತ್ತು ಕರ್ನಾಟಕಕ್ಕೆ ಕೀರ್ತಿ ತಂದಂತಹ ಮಹಾನ್ ಸಾಧಕರು ಹಾಗೂ ಈಗಿನ ಐ.ಎ.ಎಸ್ ಮಾಡುವ ವಿದ್ಯಾರ್ಥಿಗಳಿಗೆ ಒಂದು ಸ್ಫೂರ್ತಿ, ರೋಲ್ ಮಾಡೆಲ್ ಆಗಿದ್ದರು ಎಂದರು.

ತಮ್ಮ ಸುದೀರ್ಘ 37 ವರ್ಷಗಳ ಸೇವಾ ಅವಧಿಯಲ್ಲಿ ತಮ್ಮ ಅಧಿಕಾರ ವ್ಯಾಪ್ತಿಯನ್ನು ಬಡವರಿಗೆ, ಶೋಷಿತರಿಗೆ, ದಿನ ದಲಿತರಿಗೆ ಮುಡಿಪಾಗಿಟ್ಟಿದ್ದರು ಹಾಗೂ ಜೊತೆ-ಜೊತೆಗೆ ನಟನೆಯನ್ನು ಮೈಗೂಡಿಸಿಕೊಂಡು ಅನೇಕ ಯಶಸ್ವೀ ಚಿತ್ರಗಳನ್ನು ಕೊಟ್ಟು ಚಿತ್ರರಂಗಕ್ಕೂ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೇ ಇಡೀ ರಾಜ್ಯದಲ್ಲಿ ಹರಿದು ಹಂಚಿ ಹೋಗಿದ್ದ ಛಲವಾದಿ ಸಮುದಾಯವನ್ನು ಒಗ್ಗೂಡಿಸಿ, ಮಹಾಸಭಾವನ್ನು ಸ್ಥಾಪಿಸಿ, ಸಮುದಾಯಕ್ಕೂ ಕೂಡ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಅವರ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಂತಾಪ ಸೂಚಿಸಿದರು.

ಮಹಾಸಭಾದ ತಾಲ್ಲೂಕು ಅಧ್ಯಕ್ಷ ಬಸವರಾಜ ಡಿ. ಸಾವಕ್ಕನವರ ಹಾಗೂ ನಿವೃತ್ತ ಶಿಕ್ಷಕ ಶ್ರೀಕಾಂತ ಹೊಸಮನಿ, ಸಮಾಜದ ಮುಖಂಡ ಕುಬೇರಪ್ಪ ಅಟವಾಳಗಿ, ಅಂಬೇಡ್ಕರ್ ಸೇವಾ ಸಂಸ್ಥೆ ಸಂಸ್ಥಾಪಕ ಸಿ.ಶ್ರೀಧರ್, ಕಲಾವಿದ ಮಹೇಶ್, ಮುತ್ತುರಾಜ್ ಸಾವಕ್ಕನವರ, ಸಂಸ್ಥೆಯ ಪದಾಧಿಕಾರಿಗಳಾದ ಗುಡ್ಡೇಶ್ ಎಂ, ಮಣಿಕಂಠ ಎಸ್, ಗೋಪಿ, ಹಂಸಧ್ವಜ, ಶಾಂತಮ್ಮ ಎಂ, ವೀಣಾ ಘಂಟೇರ್, ನಾಗರತ್ನ ಹಾಗೂ ನಗರದ ಮುಖಂಡ ರಾದ ನಾಗರಾಜ್, ಹನುಮಂತ ಎಸ್. ಉಪಸ್ಥಿತರಿದ್ದರು.





# ಅಯೋಧ್ಯೆಯಲ್ಲಿ ಅನುರಣಿಸಿದ ಬೆಳ್ಕಳೆ ಚೆಂಡೆ ಬಳಗದ ಚೆಂಡೆ ವಾದನ

ಅಯೋಧ್ಯೆ, ಮಾ. 3 - ಶ್ರೀ ರಾಮಲಲ್ಲಾ ಪ್ರತಿಷ್ಠಾ ದಿನದಿಂದ 48 ದಿನಗಳ ಕಾಲ ನಡೆಯುತ್ತಿರುವ ಮಂಡಲ ಪೂಜೆ ಮತ್ತು ಪಲ್ಲಕ್ಕಿ ಉತ್ಸವಕ್ಕೆ ಪೇಜಾವರ ಶ್ರೀ ವಿಶ್ವ ಪ್ರಸನ್ನ ತೀರ್ಥರ ಅನುಗ್ರಹದೊಂದಿಗೆ ಕಳೆದ ವಾರ ಶ್ರೀ ಮಹಾಲಿಂಗೇಶ್ವರ ಚೆಂಡೆ ಬಳಗ ಬೆಳ್ಕಳೆ ಇವರಿಂದ ಚೆಂಡೆ ಸೇವೆ ನಡೆಯಿತು.

ಬಳಗದಿಂದ ಉಮೇಶ್ ಬಾಧ್ಯ, ಶ್ರೀಹರ್ಷ ಬೆಳ್ಕಳೆ, ರವಿ ಸಾಮಗ, ಸುನಿಲ್ ಭಟ್, ಶ್ರೀನಿಧಿ ಹಂದೆ, ಶ್ರೀನಾಥ್, ರಾಘವೇಂದ್ರ, ವಿಕ್ರಮ್ ಭಟ್, ನವೀನ್ ಬಾಧ್ಯ, ಅಭಿಲಾಷ್, ಪ್ರಸಾದ್, ಪನ್ನಗ ಸಾಮಗ, ಅಭಿಷ್ಟ ಹೆಬ್ಬಾರ್ ಸೇವೆಯಲ್ಲಿ ಪಾಲ್ಗೊಂಡರು.

2006 ರಲ್ಲಿ ಆರಂಭವಾದ ಬೆಳ್ಕಳೆ ಚೆಂಡೆ ಬಳಗವು ಉಡುಪಿ, ಮಂತ್ರಾಲಯ, ತಿರುಪತಿ ಹಾಗೂ ರಾಜ್ಯ ಮತ್ತು ಹೊರ ರಾಜ್ಯದ ಅನೇಕ ಧಾರ್ಮಿಕ ಕ್ಷೇತ್ರಗಳಲ್ಲಿ ಚೆಂಡೆ ವಾದನ ಕಾರ್ಯಕ್ರಮ ನೀಡುತ್ತಾ ಬರುತ್ತಿದ್ದಾರೆ. ಇದೀಗ ಮರ್ಯಾದಾ ಪುರುಷೋತ್ತಮ, ಶ್ರೀರಾಮಚಂದ್ರನ ನಾಡಿನಲ್ಲಿ ಜಗತ್ತಿನಾದ್ಯಂತ ಇರುವ ಕೋಟ್ಯಂತರ ಹಿಂದೂಗಳ ಸ್ವಾಭಿಮಾನದ ಪ್ರತೀಕವಾಗಿ ತಲೆ ಎತ್ತಿ ನಿಂತಿರುವ ಭವ್ಯ ಶ್ರೀ ರಾಮ ಮಂದಿರದಲ್ಲಿ ಚೆಂಡೆ ವಾದನ ಸೇವೆ ನೀಡುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದಂತಾಗಿದೆ.

# ಎಕ್ಕೆಗೊಂದಿ : 2 ಹನಿ ಲಸಿಕೆಯಿಂದ ಅಂಗವಿಕಲತೆಗೆ ತಡೆ



ಮಲೇಬೆನ್ನೂರು, ಮಾ.3- ಎಕ್ಕೆಗೊಂದಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಹರಿಹರ ತಾಲ್ಲೂಕು ಮಟ್ಟದ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಬೆಳ್ಳೂಡಿ ಗ್ರಾ.ಪಂ. ಉಪಾಧ್ಯಕ್ಷೆ ಶ್ರೀಮತಿ ನೇತ್ರಾವತಿ ವೀರಣ್ಣ ಅವರು ಮಗುವಿಗೆ ಲಸಿಕೆ ಹಾಕುವ ಮೂಲಕ ಉದ್ಘಾಟಿಸಿದರು.

ಈ ವೇಳೆ ಪ್ರಾಸ್ತಾವಿಕವಾಗಿ ಮಾತನಾಡಿದ ಟಿಹೆಚ್ಓ ಡಾ. ಪ್ರಶಾಂತ್ ಅವರು, 2 ಹನಿ ಪೋಲಿಯೋ ಲಸಿಕೆ ಹಾಕುವುದರಿಂದ ಅಂಗವಿಕಲತೆ ಆಗದಂತೆ ನೋಡಿಕೊಳ್ಳಬಹುದು. ಮಾರ್ಚ್ 3 ರಿಂದ 6 ರವರೆಗೆ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಈ ಪೋಲಿಯೋ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಬೇಕು. ಹರಿಹರ ತಾಲ್ಲೂಕಿನಲ್ಲಿ 22359 ಮಕ್ಕಳು ಈ ಲಸಿಕೆ ಅರ್ಹರಿದ್ದು, 4 ದಿನಗಳಲ್ಲಿ ಶೇ.100 ರಷ್ಟು ಲಸಿಕೆಯನ್ನು ಹಾಕುವ ಗುರಿಹೊಂದಿದ್ದೇವೆ ಎಂದು ಡಾ.ಪ್ರಶಾಂತ್ ತಿಳಿಸಿದರು.

ವೈದ್ಯಾಧಿಕಾರಿ ಡಾ. ತಿಪ್ಪೇಸ್ವಾಮಿ, ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ, ಸುಧಾ ಸುಲಾಖೆ, ಗ್ರಾ.ಪಂ. ಸದಸ್ಯರಾದ ಶಿವಪ್ಪ, ಹನುಮಂತಪ್ಪ, ಆಶಾ ಕಾರ್ಯಕರ್ತೆ ಚಂದ್ರಕಲಾ, ಅಂಗನವಾಡಿ ಕಾರ್ಯಕರ್ತೆ ನೇತ್ರಾವತಿ, ಎಸ್‌ಡಿಎಂಸಿ ಅಧ್ಯಕ್ಷೆ ನೇತ್ರಾವತಿ ಹಾಗೂ ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

# 10 ದಿನಗಳಲ್ಲಿ 12 ರಾಜ್ಯಗಳಲ್ಲಿ ಪ್ರಧಾನಿ ಮೋದಿ ಸಂಚಾರ



ನವದೆಹಲಿ, ಮಾ. 3 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮುಂದಿನ ಹತ್ತು ದಿನಗಳಲ್ಲಿ 12 ರಾಜ್ಯಗಳಲ್ಲಿ ಸಂಚಾರ ನಡೆಸಲಿದ್ದು, 29 ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಲೋಕಸಭಾ ಚುನಾವಣೆ ಘೋಷಣೆಗೂ ಮುನ್ನ ಅವರು ಈ ಪ್ರವಾಸ ಕೈಗೊಳ್ಳಲಿದ್ದಾರೆ. ತೆಲಂಗಾಣ, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳ, ಬಿಹಾರ, ಜಮ್ಮು ಮತ್ತು ಕಾಶ್ಮೀರ, ಅಸ್ಸಾಂ, ಅರುಣಾಚಲ ಪ್ರದೇಶ, ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ ಹಾಗೂ ದೆಹಲಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೋದಿ ಪ್ರವಾಸ ಕೈಗೊಳ್ಳಲಿದ್ದಾರೆ.

ಈ ಸಂದರ್ಭದಲ್ಲಿ ಅವರು ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪ್ರಧಾನಿ ಹಲವಾರು ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಏಪ್ರಿಲ್ - ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿದ್ದು, ಅದಕ್ಕೆ ಮುಂಚೆ ಅಭಿವೃದ್ಧಿ ಪರ ಕ್ರಮಗಳನ್ನು ಪ್ರಮುಖವಾಗಿ ಬಿಂಬಿಸಲು ಮುಂದಾಗಿದ್ದಾರೆ.

# ಲೋಕಸಭಾ ಕ್ಷೇತ್ರಕ್ಕೆ ಟಿಕೆಟ್ ನೀಡುವಂತೆ ಡಿಬಿ ಆಗ್ರಹ

ದಾವಣಗೆರೆ, ಮಾ.3- ಚಿತ್ರದುರ್ಗ ಲೋಕಸಭಾ ಮೀಸಲು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ನೀಡುವಂತೆ ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಆಗ್ರಹಿಸಿದ್ದಾರೆ.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ ಎಂದರು.

ನನ್ನ ರಾಜಕೀಯ ಜೀವನ ಆರಂಭವಾಗಿದ್ದೇ ಚಿತ್ರದುರ್ಗ ಜಿಲ್ಲೆಯಿಂದ. ಜಿಲ್ಲೆಯ ಶಾಸಕರು, ಮುಖಂಡರು ನನಗೆ ಚಿರಪರಿಚಿತರಿದ್ದು, ಕಾಂಗ್ರೆಸ್ ಟಿಕೆಟ್ ನೀಡಿದರೆ ನನ್ನ ಗೆಲುವು ಶತಃಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಸದಸ್ಯನಾಗಿ ಕಾರ್ಯದರ್ಶಿಯಾಗಿ, ಸಂಯೋಜಕನಾಗಿ, ಮಾಧ್ಯಮ ವಿಶ್ಲೇಷಕನಾಗಿ ವಕ್ತಾರನಾಗಿ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೇನೆ. ದಾವಣಗೆರೆ ನಗರಸಭೆಯಲ್ಲಿ ಮೂರು ಬಾರಿ ಗೆಲವು ಸಾಧಿಸಿ, ಒಮ್ಮೆ ಅಧ್ಯಕ್ಷನಾಗಿದ್ದೇನೆ. ಉತ್ತಮ ಸೇವೆ ಸಲ್ಲಿಸಿ ನಾಡಿನ ಮಠಾಧೀಶರಿಂದ ಆದರ್ಶನಗರಸಭಾ ಅಧ್ಯಕ್ಷ ಎಂಬ ಬಿರುದನ್ನೂ ಪಡೆದಿದ್ದೇನೆ ಎಂದರು.

ಪಾರ್ಲಿಮೆಂಟ್‌ನಲ್ಲಿ ಭೋವಿ ಜನಾಂಗಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ ಎಂದು ಇದೇ ವೇಳೆ ಡಿಬಿ ಅಸಮಾಧಾನ ವ್ಯಕ್ತಪಡಿಸಿದರು. ಮಧ್ ಯಕರ್ನಾಟಕದಲ್ಲಿ ಶಾಸಕ ಸ್ಥಾನಕ್ಕೂ ಸೀಟು ಕೊಡದೆ ಅನ್ಯಾಯ ಮಾಡಲಾಗಿದೆ. ಈ ಬಾರಿ ಸಾಮಾಜಿಕ ನ್ಯಾಯದಡಿ ನನಗೆ ಟಿಕೆಟ್ ಕೊಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಂ. ಮಂಜುನಾಥ್, ಎಂ.ಕೆ. ಲಿಯಾಖತ್ ಅಲಿ, ಮೊಹಮ್ಮದ್ ಜಿಕ್ರಿಯ, ಬಿ.ಹೆಚ್. ಉದಯಕುಮಾರ್, ಡಿ.ಶಿವಕುಮಾರ್, ಸುರೇಶ್, ಕಿರಣ್, ಭಾಷಾ, ಫಯಾಜ್ ಇತರರಿದ್ದರು.


**ಸೈಟ್ ಮಾರಾಟಕ್ಕಿದೆ**
ಶಾಮನೂರಿನ ಡಾಲರ್ಸ್ ಕಾಲೋನಿ ಕೆಳಭಾಗದಲ್ಲಿ ಹೊಸದಾಗಿ ಶ್ರೀ ಸಾಮಾನ್ಯ ನೌಕರರ ಬಡಾವಣೆಯಲ್ಲಿ ನಿವೇಶನವಾಗಿರುವ 80 ಅಡಿ ರಸ್ತೆಗೆ ಹೊಂದಿಕೊಂಡಿರುವ ಉತ್ತರ ಮುಖದ 30x31 ಅಳತೆಯ ಸೈಟ್ ನಂ. 59 ನಿವೇಶನ ಮಾರಾಟಕ್ಕಿದೆ.
78927 16331
96200 22542, 99807 26995

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ. 50x80, 50x80 North ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕೆಲಸ ಖಾಲಿ ಇದೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಸೇಲ್ಸ್ ಮತ್ತು ಮ್ಯಾನೇಜ್‌ಮೆಂಟ್ ಕೆಲಸ ಖಾಲಿ ಇದೆ. ಸಂಪರ್ಕಿಸಿ :
74066 59695

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆ ಹತ್ತಿರ ಗೀತಂ ಕಾಲೇಜ್ ಹತ್ತಿರ 30x45 East, 30x40 South, 60x50 North, 30x50 West, Rate - 3000/- ದಿಂದ 3500/- ರವರೆಗೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಾರುಗಳು ಮಾರಾಟಕ್ಕಿವೆ**
Honda City 2.8 ಲಕ್ಷಕ್ಕೆ
Renault Duster 5.5 ಲಕ್ಷಕ್ಕೆ
VW Vento Diesel 4.8 ಲಕ್ಷಕ್ಕೆ
Hyundai Creta 8.5 ಲಕ್ಷಕ್ಕೆ
ದೈವಿಕ್ ಐನಳ್ಳಿ
99456 43223

**WANTED**
Applications are invited for the post of Audit Assistant
1. Number of Vancancies : 2
2. Minimum Qualification : Any Graduation with Computer knoweldge.
Shankar & Co.
Auditor & Practitioner
Amaravathi Colony, HARIHARA.
81975 70094

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992


**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 North, 40x60 North, 120 ಅಡಿ ರೋಡಿಗಿದೆ, 30x50 North, 30x40 East, 30x40 North, 30x50 West, ಪಾರ್ಕ್ ಎದುರುಗಡೆ ಇದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಹೊಸ 3 ಮನೆಗಳು ಬಾಡಿಗೆ / ಲೀಸ್‌ಗೆ ಇವೆ**
ಸುಬ್ರಹ್ಮಣ್ಯ ನಗರ (ಹೈಟೆಕ್ ಹಾಸ್ಪಿಟಲ್ ಹತ್ತಿರ) 30x40=1200 ಅಡಿಗಳು, ಡಬಲ್ ಬೆಡ್ ರೂಮ್ ಇರುವ ಹೊಸ ಮನೆಗಳು ಉತ್ತಮವಾದ ನೀರು, ಗಾಳಿ, ಬೆಳಕು ಇರುವ ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94812 48154

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ ಸಂಭ್ರಮ ಹೋಟೆಲ್ ಹಿಂಭಾಗ 30x40 ಪಶ್ಚಿಮ, 30x57 ಪೂರ್ವ ಅಕ್ಕ-ಪಕ್ಕ, ಶಿವ-ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

Use Summer Holidays Effectively
**Kids Summer Computer Education**
Learn Computer Basics, MS-Office & Internet
IATM Computers
2nd main, Akkamahadevi Samaja Complex, PJ Exten, 6th Cross, Ram & Co. Circle, Davangere.
Call for more Information
98867 63469, 90367 19573

**ಕುರಿಗಳು ಮಾರಾಟಕ್ಕಿವೆ**
ಶ್ರೀ ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ. ಐಗೂರು ರಸ್ತೆ.
ಸಂಪರ್ಕಿಸಿ 70196 02944

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

ಶ್ರೀ ದುಗ್ಗಮ್ಮ ದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.6.3.2024ರ ಬುಧವಾರ
ದಿ.7.3.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**HOUSE TO LET**
2 BHK, 1st Floor, #1653/28, 4th cross,
UMESH NILAYA
Siddaveerappa Badavane, Davanagere.
94486 66677

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 15 ನಿಮಿಷ ದೂರದಲ್ಲಿರುವ ದೊಡ್ಡ ಓಬಜ್ಜಿಹಳ್ಳಿ ಊರಿನಲ್ಲಿ ಸಿಮೆಂಟ್ ರಸ್ತೆಗೆ ಐದು ಎಕರೆ 3 ವರ್ಷದ ಅಡಿಕೆ ತೋಟ ಮಾರಾಟಕ್ಕಿದೆ, ತೋಟಕ್ಕೆ ಚಾನೆಲ್ ನೀರು ಜೊತೆಗೆ ಮೂರು ಬೋರ್ ಮತ್ತು ಗೆಸ್ಟ್ ಹೌಸ್ ಲಭ್ಯವಿದೆ. ಸಂಪರ್ಕಿಸಿ :
+91 84949 33669

**ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ಸಿ.ಜೆ.ಎಂ. ದಾವಣಗೆರೆ**

ಜಿ ಅಂಡ್ ಡಬ್ಲ್ಯೂ ಸಿ ನಂ. 05/2024

**ಅರ್ಜಿದಾರರು** : 1) ಶ್ರೀಮತಿ ಲೀಲಾ ಎನ್.ಆರ್. ಕೋ ರವೀಂದ್ರ. ಎನ್., ವಯಸ್ಸು ಸುಮಾರು 54 ವರ್ಷ.
2) ನಂದೀಶ ಜೆ.ಎಂ. ಬಿನ್ ಲೇಟ್ ಮಂಜುನಾಥ್ ಜೆ.ಎಸ್. ವಯಸ್ಸು ಸುಮಾರು 23 ವರ್ಷ, (ಬುದ್ಧಿ ಮಾಂದ್ಯನಾಗಿರುತ್ತಾನೆ) ಇವರ ವಾಸ 4ನೇ ಮೇನ್, 3ನೇ ಕ್ರಾಸ್, ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್.ಎಸ್. ಬಡಾವಣೆ, ಎ-ಬ್ಲಾಕ್, ದಾವಣಗೆರೆ.

ವಿರುದ್ಧ

**ಎದುರುದಾರರು** : ಯಾರೂ ಇಲ್ಲ

**ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ನೀಡಲಾದ ಪ್ರಕಟಣಾ ನೋಟಿಸು**

ಮೇಲ್ಕಂಡ ಪ್ರಕರಣದ ಅರ್ಜಿದಾರರು ಘನ ನ್ಯಾಯಾಲಯದಲ್ಲಿ 2ನೇ ಅರ್ಜಿದಾರನು ಬುದ್ಧಿ ಮಾಂದ್ಯನಾಗಿರುವುದರಿಂದ 2ನೇ ಅರ್ಜಿದಾರನಿಗೆ ಗಾರ್ಡಿಯನ್ ಆಗಿ 1ನೇ ಅರ್ಜಿದಾರನನ್ನು ನೇಮಕ ಮಾಡಿ ಘೋಷಿಸಲು ಕೋರಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಎದುರುದಾರರು ಇದ್ದಲ್ಲಿ ಅವರುಗಳದು ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ : 08.04.2024ರಂದು ಬೆಳಿಗ್ಗೆ 11 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ, ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 01.03.2024 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು (ಜಿ.ಎಸ್. ಸಣ್ಣವೀರಪ್ಪ)

ನ್ಯಾಯಾಲಯದ ಆದೇಶದ ಮೇರೆಗೆ **ಹಿರಿಯ ಶಿರಸ್ತೇದಾರರು** ಪ್ರಧಾನ ಹಿರಿಯ ಸಿವಿಲ್ & ಸಿ.ಜೆ.ಎಂ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿದಾರರಾದ ಶ್ರೀಯುತ ಎಸ್.ಆರ್. ಮಂಜುನಾಥ್ ಬಿನ್ ರಾಜಶೇಖರಪ್ಪ ವಯಸ್ಸು 61 ವರ್ಷ, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ ಇವರ ಮಾಹಿತಿ ಮೇರೆಗೆ ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣಾ ನೋಟೀಸ್ ನೀಡಲಾಗಿದೆ.

ನಮ್ಮ ಕಕ್ಷಿಕದಾರು ಷೆಡ್ಯೂಲ್ ಸೊತ್ತಿಗೆ ಸಂಪೂರ್ಣ ಮಾಲೀಕರಾಗಿರುತ್ತಾರೆ, ಈ ಹಿಂದೆ ದಿನಾಂಕ 06.01.2021ರಂದು ದಾವಣಗೆರೆ ಸಿಟಿ ಬಸಾಪುರ ಗ್ರಾಮದ ವಾಸಿಯಾದ ಶ್ರೀ ಹೆಚ್. ಎಸ್. ಸತೀಶ್ ಕುಮಾರ್ ಬಿನ್ ಶಿವಕುಮಾರ್ ಹೆಚ್. ಮತ್ತು ಬಿ. ಸುಭಾಷ್ ಬಿನ್ ಬಸವರಾಜ್ ಎಂಬುವವರು ಷೆಡ್ಯೂಲ್ ಸೊತ್ತನ್ನು ಬಾಡಿಗೆ ಪಡೆದು ವ್ಯವಹಾರ ನಡೆಸುತ್ತಾ ಬಂದಿದ್ದು, ಕಾರಣಾಂತರದಿಂದ ತಮ್ಮ ವ್ಯವಹಾರವನ್ನು ಸ್ಥಗಿತಗೊಳಿಸಿರುತ್ತಾರೆ. ಬಾಡಿಗೆದಾರರಾದ ಹೆಚ್.ಎಸ್. ಸತೀಶ್ ಕುಮಾರ್ ಇವರು ನಮ್ಮ ಕಕ್ಷಿಗಾರರು ಕಳುಹಿಸಿದ ಲೀಗಲ್ ನೋಟೀಸನ್ನು ಸ್ವೀಕರಿಸಿ ನಂತರ ನಮ್ಮ ಕಕ್ಷಿಗಾರರಲ್ಲಿ ಬಂದು ಷೆಡ್ಯೂಲ್ ಸ್ವತ್ತನ್ನು ಖಾಲಿ ಮಾಡಿ ಸೊತ್ತಿನ ಕೀ ಮತ್ತು ಖಾಲಿ ಸ್ವಾಧೀನವನ್ನು ನಮ್ಮ ಕಕ್ಷಿಗಾರರಿಗೆ ವಹಿಸಿರುತ್ತಾರೆ.

ಈ ಬಗ್ಗೆ ಯಾರಿಂದಲಾದರೂ ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಈ ಪ್ರಕಟಣೆ ದಿನದಿಂದ 3 ದಿನದೊಳಗೆ ಈ ಕೆಳಕಂಡ ವಕೀಲರ ವಿಳಾಸಕ್ಕೆ ಸೂಕ್ತ ದಾಖಲೆಯೊಂದಿಗೆ ಸಲ್ಲಿಸತಕ್ಕದ್ದು. ಅವಧಿ ಮುಗಿದ ನಂತರ ಬರುವ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಪ್ರಕಟಣಾ ನೋಟೀಸ್ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ಸಿಟಿ ಎನ್.ಆರ್. ರಸ್ತೆಯಲ್ಲಿರುವ # 220/3, ನೆಲಮಹಡಿಯ ಮಳಿಗೆ ಅಳತೆ 14x20 ಅಡಿ ಆರ್.ಸಿ.ಸಿ. ರೂಫಿಂಗ್ ಸೊತ್ತಿಗೆ ಚೆಕ್ಕು ಬಂಧಿ. ಪೂರ್ವಕ್ಕೆ : ಮಾಲೀಕರ ಸ್ವತ್ತು, ಪಶ್ಚಿಮಕ್ಕೆ : ಮಾಲೀಕರ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಮಾಲೀಕರ ಸ್ವತ್ತು.

ವಕೀಲರ ವಿಳಾಸ : **ಎಸ್. ನಾಗರಾಜ್ (ಆನೆಕೊಂಡ)**
ಬಿ.ಕಾಂ. ಎಲ್.ಎಲ್.ಬಿ.,
ವಕೀಲರು ಅಮರ ಬಿಲ್ಡಿಂಗ್, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸರ್ಕಾರಿ ನೌಕರಿಗಾಗಿ**
ಗವರ್ನಮೆಂಟ್ ಜಾಬ್‌ಗೆ ಸಂಪರ್ಕಿಸಿ. ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ, ಯುವತಿಯರ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ.
80733 42011

**ಬೇಕಾಗಿದ್ದಾರೆ**
ಫ್ರಂಟ್ ಆಫೀಸ್ (ಸೇಲ್ಸ್) ಕೆಲಸಕ್ಕೆ ಪಿಯುಸಿ/ಡಿಗ್ರಿ ಆದ ಮಹಿಳೆಯರು ಬೇಕಾಗಿದ್ದಾರೆ. ಅರ್ಹತೆ :
Basic Computers (Email Access), English Typing & Communication
Walking Interview : 05.03.2024
Sunday at 11.00 am to 2.00 pm
ಮಧುವನ ಟೂರ್ಸ್, ಜಯದೇವ ಸರ್ಕಲ್, ದಾವಣಗೆರೆ.
99800 78654

**NEED COMPUTER OPERATER**
For Cyber Shop, Near Ram & Co. Circle, Davangere.
70221 58935

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋ ರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6 Pm
ಬರುವಾಗ ದಯವಿಟ್ಟು ಫೋಟೋ, ಬಯೋಡೇಟಾ ತನ್ನಿ

**WANTED TEACHER/ CO-ORDINATOR (FEMALE)**
Any Degree with Good Communicative English.
TATVA ACADEMY
10th main, MCC 'A' Block, Davangere.
99641 10736

**SALES GIRLS WANTED**
5000 Rs - 8000 Rs
Computer Shop
10 am to 8.30 Pm
99027 65365

**2 ಬೆಡ್ ರೂಂ ಮನೆ ಬಾಡಿಗೆಗೆ**
ಡೋ.ನಂ. 240/2, 4ನೇ ಮೇನ್, ಪಿ.ಜೆ. ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಕೋ ಸರ್ಕಲ್ ಬಳಿ 2 ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
93809 21540, 89719 49707

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಶ್ರೀ ರಾಘುವೇಂದ್ರ ಜ್ಯೋತಿಷ್ಯಾಲಯ**
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ , ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ. ಗಾಂಧಿ ಸರ್ಕಲ್, ಆಹಾರ 2000, ದಾವಣಗೆರೆ.
89716 99826

**STAFF NURSES VACANCY**
1) Senior nurses (GNM) - 3, OBG & Pead exp. 2) Junior nurses (GNM) 5 Freshers prefered
3) Reception / Lab Technician-2
Mathruchaaya Health Care
Shamanur road, Dvg.
78298 08443,97427 62462

# ಬಿಸಿಲ ನಡುವೆಯೂ ರಸಿಕರ ಮನ ಸೆಳೆದ ಚಿತ್ರಸಂತೆ

ದಾವಣಗೆರೆ, ಮಾ. 3 - ನಗರದ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ದಾವಣಗೆರೆ ಚಿತ್ರಕಲಾ ಪರಿಷತ್ ವತಿಯಿಂದ ಆಯೋಜಿಲಾಗಿದ್ದ ಒಂದು ದಿನದ ಚಿತ್ರಸಂತೆಯಲ್ಲಿ ಬಾಲಕರಿಂದ ಹಿಡಿದು ನುರಿತ ಕಲಾವಿದರವರೆಗೆ ನೂರಾರು ಕಲಾವಿದರು ವಿಧ ವಿಧದ ಕಲಾಕೃತಿಗಳ ಪ್ರದರ್ಶನ ನೆರವೇರಿಸಿದರು.

ಹೊಳಲ್ಕೆರೆಯ ಅರೆಹಳ್ಳಿ ಸ್ನೇಹ ಪಬ್ಲಿಕ್ ಸ್ಕೂಲ್‌ನ 6ನೇ ತರಗತಿ ಬಾಲಕ ರಾಘವ್ ಅವರು ಚಿತ್ರದಲ್ಲೇ ಕೃತಿ ರಚಿಸುವಲ್ಲಿ ತೊಡಗಿದ್ದರು. ಬೆಂಗಳೂರಿನ ಬಸ್ ಚಾಲಕ ರವೀಶ್ ಅವರು ತೆಂಗಿನ ಕಾಯಿಯಲ್ಲಿ ಸ್ಥಳದಲ್ಲೇ ಹಲವಾರು ಕೃತಿಗಳನ್ನು ರಚಿಸುತ್ತಿದ್ದರು.

ನಗರದ ಕೆ. ಮುತ್ತಪ್ಪ ಕುಂಬಾರ್ ಅವರು ಮಣ್ಣಿನಲ್ಲಿ ಕಲಾಕೃತಿಗಳನ್ನು ಅರಳಿಸಿದ್ದರೆ, ಮಲೇಬೆನ್ನೂರಿನ ಡಿ. ಕುಮಾರ್ ಅವರು ಕಟ್ಟಿಗೆಗಳಲ್ಲಿ ಕೃಷಿ ಪರಿಕರಗಳನ್ನು ರೂಪಿಸಿದ್ದರು.

ಹರಿಹರದ ಚಿತ್ರ ಶಿಕ್ಷಕ ಬಿ. ರೇವಣಸಿದ್ದಪ್ಪ ಅವರು ಸ್ಪ್ರೆಡ್ ಮೆಥಡ್ ಮೂಲಕ ರಚಿಸಿದ ಚಿತ್ರಗಳನ್ನು ಮಾರಾಟಕ್ಕೆ ತಂದಿದ್ದರು. ಬಣ್ಣ ಹರಡುವ ಮೂಲಕ ಚಿತ್ರ ರೂಪಿಸಬೇಕಿದ್ದು, ಒಂದು ಬಾರಿ ಬಣ್ಣ ಬಳಸಿದ ನಂತರ ಎಂಟು ನಿಮಿಷಗಳಲ್ಲೇ ಇಡೀ ಚಿತ್ರ ಪೂರೈಸಬೇಕು ಎಂದವರು ಹೇಳಿದರು.

ಹರಿಹರದ ಜಿ.ಎಸ್. ಕೃಷ್ಣ ಅವರು ಸೆಮಿ ಮಾಡರ್ನ್ ಚಿತ್ರ ರೂಪಿಸುವಲ್ಲಿ ತೊಡಗಿದ್ದರು. ಬಣ್ಣವನ್ನು ಭಿತ್ತಿಗೆ ಮೆತ್ತುವ ಮೂಲಕ ಕಲಾಕೃತಿ ರೂಪಿಸುತ್ತಿದ್ದ ಅವರು, ಪ್ರತಿ ಕೃತಿ ರೂಪಿಸಲು ಹತ್ತರಿಂದ ಹದಿನೈದು ದಿನಗಳು ಬೇಕಾಗುತ್ತವೆ ಎಂದು ಹೇಳಿದರು. ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಚಿತ್ರಸಂತೆಯು ಪುಟ್ಟ ಮಕ್ಕಳು, ವಿದ್ಯಾರ್ಥಿಗಳಿಂದ ಹಿಡಿದು ಹಿರಿಯರವರೆಗೆ ನೂರಾರು ಜನರನ್ನು ಆಕರ್ಷಿಸಿತು.

ಜನರು ದೊಡ್ಡ ಸಂಖ್ಯೆಯಲ್ಲಿ ಬಂದರೂ ಸಹ ಖರೀದಿಸುವುದು ಕಡಿಮೆ ಎಂದು ಕೆಲ ಕಲಾವಿದರು ತಿಳಿಸಿದರು. ಕಲಾ ಆಸ್ವಾದನೆಗೆ ಜನರು ಬರುವುದೇ ನಮಗೆ ಸ್ಫೂರ್ತಿ ಎಂದು ಇನ್ನೂ ಕೆಲ ಕಲಾವಿದರು ಅಭಿಪ್ರಾಯ ಪಟ್ಟರು.

ಬಿಸಿಲಿನ ತಾಪದ ನಡುವೆಯೂ ಸಾಕಷ್ಟು ಕಲಾ ರಸಿಕರು ಚಿತ್ರಸಂತೆಗೆ ಆಗಮಿಸಿ ವರ್ಣಮಯ ಚಿತ್ತಾರಗಳನ್ನು ತಮ್ಮ ಮನಸ್ಸು ಹಾಗೂ ಹೃದಯಗಳಲ್ಲಿ ತುಂಬಿಕೊಳ್ಳುತ್ತಿದ್ದುದು ಕಂಡು ಬಂತು.

## ಅಶ್ವದಲ್ಲೇ ಸೌಂದರ್ಯ, ಸಂಯೋಗವೇ ಪಾವಿತ್ರ್ಯತೆ

ರವಿ ಕಾಣದ್ದನ್ನು ಕವಿ ಕಂಡ ಎಂಬ ಮಾತಿದೆ. ಕವಿಯೂ ಕಾಣದ್ದನ್ನೂ ಕಲಾವಿದ ಕಾಣಬಲ್ಲ ಎಂಬುದಕ್ಕೆ ಚಿತ್ರದುರ್ಗದ ಚಿತ್ರಕಲಾವಿದ ಟಿ.ಎಂ. ವೀರೇಶ್ ಅವರ 'ಸೇಕ್ರೆಡ್ ಯೂನಿಯನ್' ಚಿತ್ರ ಸಾಕ್ಷಿಯಾಗಿತ್ತು.

ಖಜುರಾಹೋದ ದೇವಾಲಯಗಳಲ್ಲಿರುವ ಮಿಲನ ಶಿಲ್ಪಗಳಿಂದ ಸ್ಫೂರ್ತಿ ಪಡೆದು, ಆ ದೃಶ್ಯಗಳನ್ನು ಕುದುರೆಯಲ್ಲಿ ಬಿಂಬಿಸುವ ಮೂಲಕ ವೀರೇಶ್ ಸೆಕ್ರೆಡ್ ಯೂನಿಯನ್ (ಸಂಯೋಗವೇ ಪಾವಿತ್ರ್ಯ) ಎಂಬ ಚಿತ್ರ ರಚಿಸಿದ್ದರು.

ಖಜುರಾಹೋ ದೇವಾಲಯದಲ್ಲಿ ಮಿಥುನ ಶಿಲ್ಪಗಳಿವೆ. ಸ್ತ್ರಿ - ಪುರುಷರ ಸಂಯೋಗ ಪವಿತ್ರ ಎಂದು ಈ ದೇವಾಲಯ ಸಂದೇಶ ನೀಡುತ್ತಿದೆ. ಅದೇ ಸಂದೇಶವನ್ನು ಸ್ಫೂರ್ತಿ ಹಾಗೂ ಸೌಂದರ್ಯದ ಸಂಕೇತವಾದ ಕುದುರೆಯ ಮೇಲೆ ರಚಿಸಿದ್ದೇನೆ ಎಂದವರು ಹೇಳುತ್ತಾರೆ.

ಈ ಚಿತ್ರಗಳಲ್ಲಿ ಪುರುಷ ಪ್ರಜ್ಞೆ ಹಾಗೂ ಸ್ತ್ರೀ ಶಕ್ತಿಗಳನ್ನು ಬಿಂಬಿಸಿದ್ದೇನೆ. ಸೃಷ್ಟಿ ಇರುವವರೆಗೂ ಗಂಡು ಹೆಣ್ಣಿನ ಆಕರ್ಷಣೆ ಇದ್ದೇ ಇರುತ್ತದೆ. ಈ ಆಕರ್ಷಣೆಯನ್ನು ಕುದುರೆಯ ಹಿನ್ನೆಲೆಯಿಂದ ಸಶಕ್ತವಾಗಿ ಬಿಂಬಿಸಬಹುದು ಎಂದವರು ಅಭಿಪ್ರಾಯಪಡುತ್ತಾರೆ.

ನನಗೆ ಬಾಲ್ಯದಿಂದಲೂ ಕುದುರೆಯ ಬಗ್ಗೆ ಅಪಾರ ಆಕರ್ಷಣೆ. ಈ ಬಾರಿ 'ಕುದುರೆ ಮತ್ತು ಸ್ತ್ರೀ' ಎಂಬ ಸರಣಿಯ ಚಿತ್ರಗಳನ್ನು ಪ್ರದರ್ಶನಕ್ಕೆ ತಂದಿದ್ದೇನೆ ಎಂದು ವೀರೇಶ್ ತಿಳಿಸಿದರು.

# ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಉದ್ಘಾಟಿಸಿದ ಎಸ್ಸೆಸ್ಸೆಂ





ದಾವಣಗೆರೆ, ಮಾ. 3 - ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಮತ್ತು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರುಗಳು ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಎಸ್.ಎಸ್. ಕೇರ್ ಲೈಫ್ ಟ್ರಸ್ಟ್ ಟ್ರಸ್ಟಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಆರ್.ಸಿ.ಎಚ್. ಅಧಿಕಾರಿ ಡಾ. ರೇಣುಕರಾಧ್ಯ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರುದ್ರಸ್ವಾಮಿ, ತಾಲ್ಲೂಕು ಆರೋಗ್ಯ ಅಧಿಕಾರಿ ದೇವರಾಜ್ ಪೆಟ್ಟಿಗೆ, ವೈದ್ಯಾಧಿಕಾರಿ ಡಾ. ರಾಘವೇಂದ್ರ, ಮಹಾನಗರ ಪಾಲಿಕೆಯ ಸದಸ್ಯ ಮಂಜುನಾಥ್ ಗಡಿಗುಡಾಳ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ. ಸುರೇಶ್ ಬಾರ್ಕಿ, ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗ ಮತ್ತು ಮಕ್ಕಳ ತಾಯಂದಿರು ಹಾಜರಿದ್ದರು.

# ಆರೋಗ್ಯವಂತ ಮಕ್ಕಳು ದೇಶದ ಸಂಪತ್ತು

## ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಶಾಸಕ ಕೆ.ಎಸ್.ಬಸವಂತಪ್ಪ ಚಾಲನೆ



ದಾವಣಗೆರೆ, ಮಾ. 3 - ಆರೋಗ್ಯವಂತ ಮಕ್ಕಳು ದೇಶದ ಸಂಪತ್ತು. ಪೋಲಿಯೋ ಒಂದು ಭಯಾನಕ ರೋಗ. ಈ ರೋಗ ಮಕ್ಕಳಲ್ಲಿ ಶಾಶ್ವತ ಅಂಗವಿಕಲತೆಯನ್ನು ಉಂಟು ಮಾಡುತ್ತದೆ. ಕಡ್ಡಾಯವಾಗಿ ಪೋಷಕರು ಮಕ್ಕಳಿಗೆ ಲಸಿಕೆ ಹಾಕಿಸಬೇಕೆಂದು ಶಾಸಕ ಕೆ.ಎಸ್. ಬಸವಂತಪ್ಪ ತಾಯಂದಿರಿಗೆ ಕಿವಿಮಾತು ಹೇಳಿದರು.

ಮಾಯಕೊಂಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಮಗುವಿಗೆ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಈ ರೋಗವು ಹೆಚ್ಚಾಗಿ ಕಂಡು ಬರುತ್ತದೆ. ಭಾರತದಲ್ಲಿ 2011 ರಿಂದ ಯಾವುದೇ ಪೋಲಿಯೋ ಪ್ರಕರಣಗಳು ವರದಿಯಾಗಿಲ್ಲ. ವಿಶ್ವ ಆರೋಗ್ಯ ಸಂಸ್ಥೆ ಭಾರತವನ್ನು ಪೋಲಿಯೋ ಮುಕ್ತ ರಾಷ್ಟ್ರ ಎಂದು ಘೋಷಿಸಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿಗಳಾದ ದೇವರಾಜ್ ಪಟಗ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಮ್ಮ, ಮುಖಂಡರಾದ ಗೋಪಾಲಣ್ಣ, ಆರೋಗ್ಯ ಅಧಿಕಾರಿಗಳಾದ ಗೋವಿಂದರಾಜ್ ಸೇರಿದಂತೆ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಆಸ್ಪತ್ರೆ ಸಿಬ್ಬಂದಿಗಳು ಭಾಗವಹಿಸಿದ್ದರು.

# ಪಾಕ್: ಮಳೆಗೆ 37 ಸಾವು


**(1ನೇ ಪುಟದಿಂದ)** ಪ್ರಾಂತ್ಯದಲ್ಲಿ ಮಳೆ ಅನಾಹುತ ಹೆಚ್ಚಾಗಿದೆ.

ಗ್ವಾದರ್‌ನಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿದ್ದು, ನೂರಾರು ಜನ ಮನೆ ಕಳೆದುಕೊಂಡಿದ್ದಾರೆ.

ಪಾಕಿಸ್ತಾನದಲ್ಲಿ ಸಾಮಾನ್ಯವಾಗಿ ನವೆಂಬರ್‌ನಲ್ಲಿ ಚಳಿಗಾಲದ ಮಳೆ ಆರಂಭವಾಗುತ್ತದೆ. ಈ ಬಾರಿ ಫೆಬ್ರವರಿಯಿಂದ ಚಳಿಗಾಲದ ಮಳೆ ಆರಂಭವಾಗಿದೆ. ಮುಂಗಾರಿನ ಜೊತೆಗೆ, ಚಳಿಗಾಲದ ಮಳೆಯೂ ಪಾಕಿಸ್ತಾನಕ್ಕೆ ಪ್ರತಿ ವರ್ಷ ಹಾನಿ ತರುತ್ತಿದೆ.

# ರಾಜ್ಯ ಪತ್ರಕರ್ತರ ಸಮ್ಮೇಳನ ಅಭೂತಪೂರ್ವ ಯಶಸ್ವಿ

## ಕಾರ್ಯನಿರತ ಪತ್ರಕರ್ತರ ಸಂಘ ಕೃತಜ್ಞತೆ



ದಾವಣಗೆರೆ, ಮಾ.3- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 38ನೇ ರಾಜ್ಯ ಸಮ್ಮೇಳನವು ದಾವಣಗೆರೆಯಲ್ಲಿ ಅಭೂತಪೂರ್ವ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅಭಿನಂದಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ದಶಕಗಳ ನಂತರ ನಗರದಲ್ಲಿ ಸಮ್ಮೇಳನ ನಡೆಸಲು ತೀರ್ಮಾನ ಕೈಗೊಳ್ಳಲಾಗಿತ್ತು. ಆರಂಭದಲ್ಲಿ ಸಮ್ಮೇಳನ ನಡೆಯುತ್ತದೋ, ಇಲ್ಲವೋ ಎಂಬ ಅನುಮಾನಗಳಿದ್ದವು. ಆದರೆ ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು ಎಂದರು.

ಎರಡು ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಅರ್ಥಪೂರ್ಣ ಗೋಷ್ಠಿಗಳು ನಡೆದವು. ಸುಮಾರು 5 ರಿಂದ 6 ಸಾವಿರ ಜನರು ಭಾಗವಹಿಸಿದ್ದರು. ಬಂದಿದ್ದವರಿಂದ ಊಟ, ವಸತಿ ಸೇರಿದಂತೆ ಎಲ್ಲಾ ವ್ಯವಸ್ಥೆ ಬಗ್ಗೆ ಶ್ಲಾಘನೆ ವ್ಯಕ್ತವಾಗಿದೆ ಎಂದು ಹೇಳಿದರು.

ಸಮ್ಮೇಳನದಲ್ಲಿ ಎಂಟು ನಿರ್ಣಯಗಳನ್ನು ಕೈಗೊಂಡು ಹಕ್ಕೊತ್ತಾಯ ಮಂಡಿಸಲಾಗಿತ್ತು. ಈ ಪೈಕಿ ಮುಖ್ಯಮಂತ್ರಿಗಳು ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್ ನೀಡುವ ಸೌಲಭ್ಯದ ಬಗ್ಗೆ ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಬೆಂಗಳೂರು ಹೊರತು ಪಡಿಸಿ ಎಲ್ಲಾ ಜಿಲ್ಲೆಯ ಪತ್ರಕರ್ತರೂ ಸಹ ಈ ಸೌಲಭ್ಯ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದರು.

ಪತ್ರಕರ್ತರಿಗೆ ಯಶಸ್ವಿನಿ ಯೋಜನೆಯ ಸೌಲಭ್ಯ ದೊರೆಯುವಂತೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಒತ್ತಾಯಿಸಿದ್ದೇವೆ. ಈ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಿದೆ ಎಂದು ತಗಡೂರು ಹೇಳಿದರು.

ಸಮ್ಮೇಳನದ ಯಶಸ್ಸಿಗೆ ಕಾರಣರಾದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರೂ ಸೇರಿದಂತೆ ಎಲ್ಲಾ ದಾನಿಗಳಿಗೂ, ಸಹಕಾರ ನೀಡಿದ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಮಹಾನಗರ ಪಾಲಿಕೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿ ಗಳು, ಕಾ.ನಿ.ಪ. ಸಂಘ ಹಾಗೂ ಜಿಲ್ಲಾ ವರದಿ ಗಾರರ ಕೂಟದ ಪದಾಧಿಕಾರಿಗಳು, ಸದಸ್ಯರು ಎಲ್ಲರಿಗೂ ಈ ಸಂದರ್ಭದಲ್ಲಿ ಕೃತಜ್ಞತೆ ಸಲ್ಲಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ.ಫಕೃದ್ದೀನ್, ಖಜಾಂಚಿ ಎನ್.ವಿ. ಬದರಿನಾಥ್, ರಾಜ್ಯ ಸಮಿತಿ ಸದಸ್ಯ ಕೆ.ಚಂದ್ರಣ್ಣ, ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ, ಪ್ರಧಾನ ಕಾರ್ಯದರ್ಶಿ ಡಾ. ವರದರಾಜ್ ಇತರರಿದ್ದರು.

# ಚಿತ್ರಸಂತೆಯಲ್ಲಿ ರವಿ ಚೆನ್ನಣ್ಣನವರ್ ಭಾವಚಿತ್ರ ಬರೆದ ಬಾಲಕ



ದಾವಣಗೆರೆ, ಮಾ.3- ನಗರದಲ್ಲಿ ಇಂದು ಹಮ್ಮಿಕೊಂಡಿದ್ದ ಚಿತ್ರಸಂತೆಯಲ್ಲಿ ಬೆಳ್ಳೂಡಿಯ ಬೆಸ್ಕಾಂ ಸಿಬ್ಬಂದಿ ಅಂಜಿನಪ್ಪನವರ ಮಗ ಹಾಗೂ ಹರಿಹರ ಎಂ.ಕೆ.ಇ.ಟಿ ಶಾಲೆಯ 6ನೇ ತರಗತಿ ವಿದ್ಯಾರ್ಥಿ ಪ್ರತೀಕ್ ಕ್ಷಣದಲ್ಲೇ ಅಗ್ನಿಶಾಮಕ ದಳದ ಐಜಿಪಿ ರವಿ ಡಿ. ಚೆನ್ನಣ್ಣನವರ್ ಅವರ ಭಾವಚಿತ್ರ ಬಿಡಿಸಿ ಗಮನ ಸೆಳೆದನು. ಪ್ರತೀಕ್ ಕಲೆಗೆ ಮನಸೋತ ರವಿ ಚೆನ್ನಣ್ಣನವರ್ ಅವರು ಪ್ರತೀಕ್‌ನನ್ನು ಸನ್ಮಾನಿಸಿ, ಬಹುಮಾನ ನೀಡಿ ಪ್ರೋತ್ಸಾಹ ನೀಡಿದರು.

# ಪಂಚಮಿತ್ರ ವಾಟ್ಸಪ್ ಸೇವೆಗೆ ಚಾಲನೆ

**(1ನೇ ಪುಟದಿಂದ)** ಬೀದಿ ದೀಪ ನಿರ್ವಹಣೆ, ಸ್ವಾಧೀನ ಪ್ರಮಾಣ ಪತ್ರ, ವ್ಯಾಪಾರ ಪರವಾನಗಿ, ನಿರಾಕ್ಷೇಪಣಾ ಪತ್ರ, ಜಾಬ್ ಕಾರ್ಡ್ ವಿತರಣೆ ಸೇರಿದಂತೆ ಗ್ರಾಮ ಪಂಚಾಯಿತಿ ಸೇವೆಗಳನ್ನು ಇದರಲ್ಲಿ ಪಡೆಯಬಹುದಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್ ಪಂಚಮಿತ್ರ ವಾಟ್ಸಾಪ್ ಸೇವೆಗಳ ಬಗ್ಗೆ ವಿವರಿಸಿದರು.

ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ, ದೊಡ್ಡಬಾತಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮಂಜುಳಾ.ಡಿ ಅಧ್ಯಕ್ಷತೆ ವಹಿಸಿದ್ದರು. ಹಳೆಬಾತಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಸೀತಾ ಆರ್, ದೊಡ್ಡಬಾತಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಭಾನುವಳ್ಳಿ ಸಿದ್ದಪ್ಪ, ಹಳೇಬಾತಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಪುಷ್ಪ ಎ, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಅಫ್ರಿನ್ ಭಾನು ಎಸ್.ಬಳ್ಳಾರಿ, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕರಾದ ಕರಿಬಸಪ್ಪ, ಗಿರೀಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಉಪವಿಭಾಗಾಧಿಕಾರಿ ದುರ್ಗಾಶ್ರೀ ಸ್ವಾಗತಿಸಿದರು.

# ನಡೆದರೆ ನೆಮ್ಮದಿ ಬದುಕು

**(1ನೇ ಪುಟದಿಂದ)** ಘಟಕದ ಅಧ್ಯಕ್ಷ ಎಚ್.ಎ.ಹುಣಸಘಟ್ಟ ಗದ್ದಿಗೇಶ್, ಟಿ. ಗೋಪನಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚಂದ್ರಮತಿ.ಜಿ. ಪಿ.ಮಲ್ಲೇಶಪ್ಪ, ಶಿಕ್ಷಕ ಕರಿಬಸಪ್ಪ ಕವಿತ ಮಾತನಾಡಿದರು.

ವೇದಿಕೆಯಲ್ಲಿ ಬಿಜೆಪಿ ಮಾಜಿ ಅಧ್ಯಕ್ಷ ಅರಕೆರೆ ಎ.ಬಿ.ಹನುಮಂತಪ್ಪ, ಡಿ.ಎಸ್. ಪ್ರದೀಪ್‌ಗೌಡ, ಸಾಧು ವೀರಶೈವ ಸಮಾಜದ ನ್ಯಾಮತಿ ಘಟಕದ ಅಧ್ಯಕ್ಷ ಕೋಡಿಕೊಪ್ಪ ಶಿವಣ್ಣ, ಹಳೇಮಳಲಿ ಗ್ರಾಮದ ಹಿರಿಯ ಮುಖಂಡರಾದ ಮಾವಿನ ಕೋಟೆ ಮಂಜಪ್ಪ, ಎಂ.ನಾಗರಾಜಪ್ಪ, ಪಿ.ಮಂಜಪ್ಪ, ಎಸ್.ಎಂ.ಚಂದ್ರಪ್ಪ, ಕೆ. ಆರ್.ಮಲ್ಲೇಶಪ್ಪ, ಎಂ.ಪಿ.ಷಡಾಕ್ಷರಿ, ಹಾಲಿನ ಡೈರಿ ಅಧ್ಯಕ್ಷ ಎಂ.ಗಣೇಶ್, ಎಂ.ಇ. ನವೀನ, ಜಿ.ಎಚ್.ಮಲ್ಲಿಕಾರ್ಜುನ, ಕೆ. ಎಸ್.ರಾಜಪ್ಪ, ಜಿ.ಪಿ.ರಮೇಶ್‌ಪಟೇಲ್, ಎಚ್.ಆರ್.ಮಲ್ಲೇಶಪ್ಪ, ಎಸ್.ಎಂ.ರಾಜು ಸೇರಿದಂತೆ ಇತರರಿದ್ದರು.



# ಮಾರಾಟ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ

ದಾವಣಗೆರೆ, ಮಾ. 3- ಎಲ್ಲಾ ಹೊಸ ಗಾರ್ಮೆಂಟ್ಸ್ ಗಳ ರೆಡಿಮೆಡ್ ಉಡುಪುಗಳನ್ನು ಅತಿ ಕಡಿಮೆ ದರದಲ್ಲಿ ಮಾರಾಟ ಮಾಡಲು ನಗರದ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಮಾರಾಟ ಮೇಳ ಆಯೋಜಿಸಿದ್ದು, ಇದಕ್ಕೆ ಉತ್ತಮ ಪ್ರತಿಕ್ರಿಯೆ ಬಂದ ಕಾರಣ ಕೆಲವು ದಿನಗಳ ಕಾಲ ಮುಂದುವರೆಸಲಾಗಿದೆ.

ಬ್ರಾಂಡೆಡ್ ಕಂಪನಿಗಳ ಉಡುಪುಗಳು ಮಕ್ಕಳು, ಯುವಕರು, ಪುರುಷರು, ವಯೋವೃದ್ಧರು ಹೀಗೆ ಎಲ್ಲಾ ವರ್ಗದವರಿಗೂ ಲಭ್ಯವಿದ್ದು, ಭಾರೀ ರಿಯಾಯತಿ ನೀಡಲಾಗಿದೆ.

ಪುರುಷರ ಪ್ರೀಮಿಯರ್ ಸಿದ್ಧ ಉಡುಪುಗಳು ಶರ್ಟ್, ಟೀ ಶರ್ಟ್, ಜೆಂಟ್ಸ್ ಪ್ಯಾಂಟ್, ಕಂಪರ್ಟ್ ಫಿಟ್, ನ್ಯಾರೋ, ಪೆನ್ಸಿಲ್, ರಿಲ್ಯಾಕ್ಸಡ್, ಕ್ಯಾಷುಯಲ್ ಫಿಟ್ ಪ್ಯಾಂಟ್, ಕಿಡ್ಸ್ ಪ್ಯಾಂಟ್, ಟೀ ಶರ್ಟ್, ಲೋವೇರ್ ಬರ್ಮುಡಾ, ಟಾಪ್, ಕೇಪ್ರೀ ಮುಂತಾದವು ಕೇವಲ 499 ರೂ.ಗಳಿಂದ 999 ರೂ. ಗಳ ವರೆಗೆ ಮಾರಾಟ ಮಾಡಲಾಗುತ್ತಿದೆ.

ಮಹಿಳೆಯರ ಸಿದ್ಧ ಉಡುಪುಗಳು ಲಾಂಗ್, ಕುರ್ತೀಸ್, ಪ್ಲಾಜೋ, ಶಾರ್ಟ್ ಕುರ್ತೀಸ್, ಹೆವಿ ರಾಯನ್, ಕಂಪ್ಯೂಟರ್ ವರ್ಕ್, ಲೇಡಿಸ್ ಜೀನ್ಸ್ ಪ್ಯಾಂಟ್, ಲೇಡಿಸ್ ಜೀನ್ಸ್ ಜಾಕೆಟ್ ಮತ್ತು ಮಕ್ಕಳ ಉಡುಪುಗಳು 149 ರಿಂದ 599 ರೂ. ಗಳವರೆಗೆ ಲಭ್ಯವಿವೆ. ಬಾಲಕೀಯರ, ಮಹಿಳೆಯರ ಹಾಗೂ ಪುರುಷರ ಒಳ ಉಡುಪುಗಳು ಕೇವಲ 40 ರಿಂದ 80, 100 ರೂ. ಗಳು ಮಾತ್ರ.

## ಓದುಗರ ಪತ್ರ

### ಮುದ್ರಾಂಕ ಶುಲ್ಕ ಏರಿಕೆ ಅವೈಜ್ಞಾನಿಕ..!

ಮಾನ್ಯರೇ,

ಕೆಲ ದಿನಗಳ ಹಿಂದೆ ರಾಜ್ಯ ಸರ್ಕಾರ ಮುದ್ರಾಂಕ ಶುಲ್ಕವನ್ನು ಅವೈಜ್ಞಾನಿಕವಾಗಿ ಏರಿಸಿದ್ದು ಬೆಲೆ ಏರಿಕೆಯಿಂದ ಸಾರ್ವಜನಿಕರು ಕಂಗಾಲಾಗಿದ್ದಾರೆ. ಸರ್ಕಾರದ ವಿವಿಧ ಯೋಜನೆಗಳು ಸೇರಿದಂತೆ, ಕೃಷಿ ಉಪಕರಣಗಳಿಗೆ ಸಹಾಯಧನ, ಮುಚ್ಚಳಿಕೆ ಪತ್ರ, ಪ್ರಮಾಣ ಪತ್ರಗಳನ್ನು 20 ರೂ.ಗಳ ಅಫಿಡೆವಿಟ್‌ನಲ್ಲಿ ಸಲ್ಲಿಸಲಾಗುತ್ತಿತ್ತು. ಆದರೆ ಏಕಾಏಕಿ ಈ ದರವನ್ನು ಅವೈಜ್ಞಾನಿಕವಾಗಿ 5 ಪಟ್ಟು ಅಂದರೆ 100 ರೂಪಾಯಿಗೆ ಹೆಚ್ಚಳ ಮಾಡಿದ್ದು, ಕನಿಷ್ಠ ದರವೂ ಇದಾಗಿದೆ. ವಿವಿಧ ಬಗೆಯ ಯೋಜನೆಗಳಿಗೆ 20 ರೂ.ಗಳ ಪ್ರಮಾಣ ಪತ್ರ ಸಾಕು. ಆದರೆ 100 ರೂಗಳ ಅವಶ್ಯಕತೆ ಇಲ್ಲದಿದ್ದರೂ ಕೂಡ ಬೆಲೆ ಏರಿಕೆಯ ಅನಿವಾರ್ಯತೆಯಿಂದಾಗಿ ತೆಗೆದುಕೊಳ್ಳಬೇಕಾಗಿದೆ. ಸಾಲ, ಆಸ್ತಿ ಖರೀದಿಯ ಪತ್ರಗಳ ಮೇಲೆ ಹೆಚ್ಚಳ ಮಾಡಲಿ, ಆದರೆ ರೈತಾಪಿ ಮತ್ತು ಮಧ್ಯಮ ವರ್ಗದವರೇ ಹೆಚ್ಚಾಗಿ ಉಪಯೋಗಿಸುವಂತಹ ಅಫಿಡೆವಿಟ್ ದರವನ್ನು ಹಳೆಯ ದರಕ್ಕೆ ಇಳಿಸಲು ರಾಜ್ಯ ಸರ್ಕಾರ ಚಿಂತಿಸಬೇಕಾಗಿದೆ.

- ಮುರುಗೇಶ ಡಿ. ದಾವಣಗೆರೆ.

# ನಗರದಲ್ಲಿ ಇಂದು ಕತ್ತಲ ಹಾಡು ಬೆಳಕಿನೆಡೆಗೆ

ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಜಿಲ್ಲಾ ಹಿರಿಯ ನಾಗರಿಕರ ಸಂಘ, ಲಾಯರ್ಸ್ ಗಿಲ್ಡ್ ಅಸೋಸಿಯೇಷನ್ ಮತ್ತು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಹಾಗೂ ಬೆಂಗಳೂರಿನ ಜೆ. ಹೆಚ್. ಪಟೇಲ್ ಫೌಂಡೇಷನ್ ಇವರ ಸಹಯೋಗದೊಂದಿಗೆ ಇಂದು ಸಂಜೆ 6 ರಿಂದ 8ರವರೆಗೆ ನಗರದ ವಿದ್ಯಾನಗರದಲ್ಲಿರುವ ಕುವೆಂಪು ಕನ್ನಡ ಭವನದಲ್ಲಿ ನಾದ ಮಣಿನಾಲ್ಕೂರು ಇವರಿಂದ ಮಾನವೀಯ ಸಮಾಜ ನಿರ್ಮಾಣಕ್ಕಾಗಿ ಕತ್ತಲ ಹಾಡು.. ಬೆಳಕಿನೆಡೆಗೆ ಅಮೂಲ್ಯ ಹಾಡುಗಳ ಕಾರ್ಯಕ್ರಮ ಏರ್ಪಡಿಸಲಾಗಿದೆ.

# ರಿವೈಂಡಿಂಗ್, ರಿಪೇರಿ ತರಬೇತಿ

ದಾವಣಗೆರೆ, ಮಾ. 3 - ರುಡ್ ಸೆಟ್ ಸಂಸ್ಥೆಯ ವತಿಯಿಂದ ರಿವೈಂಡಿಂಗ್ ಮತ್ತು ರಿಪೇರಿ ಕುರಿತ ತರಬೇತಿಯನ್ನು ಇದೇ ದಿನಾಂಕ 15 ರಿಂದ 30 ದಿನಗಳ ಕಾಲ ಉಚಿತವಾಗಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 10 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 9740982585, 93801 62042, 9113880324 ಗೆ ಸಂಪರ್ಕಿಸಬಹುದೆಂದು ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ರವಿಕುಮಾರ ತಿಳಿಸಿದ್ದಾರೆ.

# ಬೆಳ್ಳೂಡಿ : ಪಲ್ಸ್ ಪೋಲಿಯೋ ಅಭಿಯಾನ



ಮಲೇಬೆನ್ನೂರು, ಮಾ.3- ಬೆಳ್ಳೂಡಿ ಗ್ರಾಮದಲ್ಲಿ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಗ್ರಾ.ಪಂ. ಅಧ್ಯಕ್ಷ ಬಿ.ಉಮೇಶ್ ಅವರು ಮಕ್ಕಳಿಗೆ ಪೋಲಿಯೋ ಹನಿ ಹಾಕುವುದರ ಮೂಲಕ ಚಾಲನೆ ನೀಡಿದರು. ಗ್ರಾ.ಪಂ ಸದಸ್ಯರಾದ ರತ್ನಮ್ಮ ಬಿ.ಸಿದ್ದೇಶ್, ವೀರೇಶ್ ಪೂಜಾರ್, ಆಸ್ಪತ್ರೆಯ ವೈದ್ಯಾಧಿಕಾರಿ ಶಿಲ್ಪಾ ಜಿ.ನಾಯಕ್, ಸಿಬ್ಬಂದಿಗಳಾದ ಪಂಚಾಕ್ಷರಿ, ಶ್ರೀಮತಿ ರೇಣುಕಾ ಮತ್ತು ಆಶಾ ಹಾಗೂ ಇತರರು ಈ ವೇಳೆ ಹಾಜರಿದ್ದರು.

# ನಗರದಲ್ಲಿ ಇಂದು ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ

ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ವತಿಯಿಂದ ಇಂದು ಮಧ್ಯಾಹ್ನ 1.30 ಕ್ಕೆ ಆದಿ ಕರ್ನಾಟಕ ವಿದ್ಯಾರ್ಥಿ ನಿಲಯ ಭೂಮಿ ಪೂಜೆ ನಡೆಯಲಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಆದಿ ಕರ್ನಾಟಕ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಯ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ ಎಂದು ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ ತಿಳಿಸಿದ್ದಾರೆ.

# 9 ರಂದು ಶೀಬಾರದಲ್ಲಿ ರಥೋತ್ಸವ

ಚಿತ್ರದುರ್ಗ, ಮಾ.3- ಸಮೀಪದ ಶಿಬಾರದಲ್ಲಿ ಇದೇ ದಿನಾಂಕ 9ರಂದು ಸಂಜೆ 5.30 ಗಂಟೆಗೆ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ವತಿಯಿಂದ ಶ್ರೀ ಜಗದ್ಗುರು ಗುರುಪಾದ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹಾಗು ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಗಳ ಸ್ಮರಣಾರ್ಥವಾಗಿ 69ನೇ ವರ್ಷದ ರಥೋತ್ಸವ ಜರುಗಲಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಇದೇ ದಿನಾಂಕ 10 ರಿಂದ 23 ರವರೆಗೆ ದನಗಳ ಜಾತ್ರೆ ನಡೆಯಲಿದ್ದು, ರಾಜ್ಯ ಮತ್ತು ಹೊರರಾಜ್ಯಗಳ ವಿವಿಧ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ವಿವಿಧ ತಳಿಗಳ ರಾಸುಗಳು ಭಾಗವಹಿಸಲಿವೆ ಎಂದು ಮಠದ ಪ್ರಕಟಣೆ ತಿಳಿಸಿದೆ.

# ರೋಬೋಟ್ ರೂಪಿಸಿದ ಐಐಟಿ ಸಂಶೋಧಕರು

**(1ನೇ ಪುಟದಿಂದ)** ಅಧ್ಯಯನ ಹೆಚ್ಚಿನ ಪ್ರಮಾಣದಲ್ಲಿ ನಡೆದಿಲ್ಲ. ಪ್ರಸಕ್ತ ಇರುವ ಪದ್ಧತಿಯಲ್ಲಿ ಅಧ್ಯಯನಕ್ಕೆ ಹಡಗುಗಳನ್ನು ಬಳಸಲಾಗುತ್ತದೆ.

ಈ ಪ್ರಕ್ರಿಯೆ ದುಬಾರಿ ಹಾಗೂ ಸೂಕ್ತ ಸಮಯದಲ್ಲಿ ಅಧ್ಯಯನ ನಡೆಸಲು ಸಾಧ್ಯವಾಗದು ಎಂದು ಐಐಟಿ ಮಂಡಿಯ ರೋಬೋಟಿಕ್ಸ್ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಜಗದೀಶ್ ಕಡಿಯಮ್ ಹೇಳಿದ್ದಾರೆ. ಅದೇ ರೀತಿ ಅಣೆಕಟ್ಟೆಗಳಲ್ಲಿ ನೀರಿನ ಅಧ್ಯಯನ ನಡೆಸುವುದೂ ದುಬಾರಿ ಹಾಗೂ ಅಪಾಯಕಾರಿ. ಈ ಸಮಸ್ಯೆಗಳನ್ನು ಜಲ ರೋಬೋಟ್‌ಗಳು ನಿವಾರಿಸುತ್ತವೆ. ಇವುಗಳಿಂದ ಸುರಕ್ಷಿತ, ಕಡಿಮೆ ವೆಚ್ಚದ ಹಾಗೂ ಅತ್ಯಾಧುನಿಕ ಪರಿಹಾರ ದೊರೆಯುತ್ತದೆ ಎಂದು ಕಡಿಯಮ್ ತಿಳಿಸಿದ್ದಾರೆ.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ.

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/3654/2023-24 ದಿನಾಂಕ: 02.03.2024

**ಅಲ್ಪಾವಧಿ ಇ-ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ-07/2023-24**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗ ವ್ಯಾಪ್ತಿಗೆ ಬರುವ **ಸ್ಮಾರ್ಟ್ ಸಿಟಿ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ದಾವಣಗೆರೆ ಬಸ್ ನಿಲ್ದಾಣದ ಔಷಧಿ ಮಳಿಗೆ ಸಂಖ್ಯೆ-15, Pizza burger corner ಮಳಿಗೆ ಸಂಖ್ಯೆ-16 ಮತ್ತು ವಸತಿ ಗೃಹ (ಲಾಡ್ಜ್) ಮಳಿಗೆ ಸಂಖ್ಯೆ-19 ಹಾಗೂ ಬೇತೂರು ರಸ್ತೆಯಲ್ಲಿರುವ ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ-3, ಜನರಲ್ ಮಳಿಗೆ ಸಂಖ್ಯೆ-6 (ಅಂಗವಿಕಲರಿಗೆ), ಉಪಹಾರ ಗೃಹ ಮಳಿಗೆ ಸಂಖ್ಯೆ-7, ಜನರಲ್ ಮಳಿಗೆ ಸಂಖ್ಯೆ-9 ಮತ್ತು ದ್ವಿ-ಚಕ್ರ ವಾಹನ ನಿಲ್ದಾಣ ಮಳಿಗೆ ಸಂಖ್ಯೆ-11** ಇವುಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಮಲೆಬೆನ್ನೂರು ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ-1ಕ್ಕೆ** ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ. ಸದರಿ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಹಾಗೂ ನಿಗಮದ ವೆಬ್‌ಸೈಟ್ **https://ksrtc.karnataka.gov.in**ನಲ್ಲಿ **ದಿ: 04.03.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ-577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ ವಿಭಾಗೀಯ ಸಂಚಾರ ಅಧಿಕಾರಿ, **7760990452**, ಸಹಾಯಕ ಸಂಚಾರ ಅಧೀಕ್ಷಕರು-**7022030183.**

ಸಹಿ/- ಹಿ.ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ, ದಾವಣಗೆರೆ.

ವಾಸಾಸಂಇ/ಉನಿ-ಸಿ.ಪಿ/4019/ಕೆಎಸ್‌ಎಂಸಿಎ/2023-24



**ಸಾರ್ವಜನಿಕರ ಗಮನಕ್ಕೆ**

**ಶಾಲಾ ಹೆಸರನ್ನು ಬದಲಾವಣೆ ಮಾಡಿರುವ ಬಗ್ಗೆ**



ಹರಿಹರದ ಗುತ್ತೂರಿನ ಚಿಂತಾಮಣಿ ನಗರದಲ್ಲಿ ಶ್ರೀ ರಾಮಲೀಲಾ ಎಜುಕೇಷನ್ ಟ್ರಸ್ಟ್ (ರಿ.) ಇದರ ಅಡಿಯಲ್ಲಿ 2011-12ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಲಿಟ್ಲ್ ಚಾಂಪ್ಸ್ ಶಾಲೆಯನ್ನು ನಡೆಸುತ್ತಿದ್ದು, ಮುಂಬರುವ ಶೈಕ್ಷಣಿಕ ವರ್ಷ 2024-25ನೇ ಸಾಲಿನಿಂದ ಈ ನಮ್ಮ ಲಿಟ್ಲ್ ಚಾಂಪ್ಸ್ ಶಾಲೆಯ ಹೆಸರನ್ನು ಉಪನಿರ್ದೇಶಕರು (ಆಡಳಿತ) ರವರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ, ಇವರ ಅನುಮತಿಯೊಂದಿಗೆ ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್ ಸ್ಕೂಲ್ ಎಂದು ಬದಲಾಯಿಸಿರುತ್ತೇವೆಂದು ಈ ಮೂಲಕ ಹಾಲಿ ನಮ್ಮ ಶಾಲೆಯ ಎಲ್ಲಾ ಪೋಷಕರಿಗೂ ಹಾಗೂ ಸಮಸ್ತ ಸಾರ್ವಜನಿಕರಿಗೂ ಶಾಲೆಯ ಹೆಸರು ಬದಲಾಗಿರುವ ವಿಷಯವನ್ನು ತಿಳಿಸಲು ನಾವುಗಳು ಇಚ್ಛಿಸುತ್ತೇವೆ.

ದಿನಾಂಕ : 01.03.2024
ಸ್ಥಳ : ದಾವಣಗೆರೆ

**ವಿಜಯಕುಮಾರ್**
ಕಾರ್ಯದರ್ಶಿಯವರು
ಶ್ರೀ ರಾಮಲೀಲಾ ಎಜುಕೇಷನ್ ಟ್ರಸ್ಟ್ (ರಿ.)
ಡಿಸಿಎಂ ಟೌನ್ ಶಿಪ್, ದಾವಣಗೆರೆ.
ಮೊ : 98444 99944



**ಮಾನ್ಯ ಗೌರವಾನ್ವಿತ 2ನೇ ಸಿವಿಲ್ ನ್ಯಾಯಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದಾವಣಗೆರೆ**

**ಕ್ರಿಮಿನಲ್ ಮಿಸ್ ಸಂಖ್ಯೆ : 277/2024**

**ಅರ್ಜಿದಾರರು** : 1. ಶ್ರೀಮತಿ. ಸವಿತಾ ಎಂ.ಬಿ ಬಿನ್ ಲೇಟ್ ಎಂ.ಪಿ. ಬಸವರಾಜ್ ಕೋಂ ಗಿರೀಶ್ ವಯಸ್ಸು: ಸುಮಾರು 35 ವರ್ಷ. 2. ಶ್ರೀಮತಿ ಮಂಜುಳಾ ಎಂ.ಬಿ ಕೋಂ ಲೇಟ್ ಎಂ.ಪಿ. ಬಸವರಾಜ್ ವಯಸ್ಸು: ಸುಮಾರು 58 ವರ್ಷ. 3. ಶ್ರೀಮತಿ ನಿಖಿತಾ ಎಂ.ಬಿ ಬಿನ್ ಲೇಟ್ ಎಂ.ಪಿ. ಬಸವರಾಜ್ ವಯಸ್ಸು: ಸುಮಾರು 39 ವರ್ಷ. 4. ಶ್ರೀಮತಿ ರಂಜಿತಾ ಎಂ.ಬಿ ಬಿನ್ ಲೇಟ್ ಎಂ.ಪಿ. ಬಸವರಾಜ್ ಕೋಂ ಬಸವರಾಜ್ ಹೆಚ್. ಗಡದ, ವಯಸ್ಸು: ಸುಮಾರು 37 ವರ್ಷ.

1 ರಿಂದ 4ನೇ ಅರ್ಜಿದಾರರ ವಾಸ: #241/1, ಪಿಜೆ. ಬಡಾವಣೆ, 4ನೇ ಮುಖ್ಯರಸ್ತೆ, 4ನೇ ಕ್ರಾಸ್, ದಾವಣಗೆರೆ-577002 **ವಿರುದ್ಧ**

**ಎದುರುದಾರರು** : 1. ಜನನ ಮತ್ತು ಮರಣಗಳ ಮುಖ್ಯ ನೊಂದಣಾಧಿಕಾರಿಗಳು ಮಹಾನಗರಪಾಲಿಕೆ, ದಾವಣಗೆರೆ

**ಸಾರ್ವಜನಿಕ ಪ್ರಕಟಣೆ**

ಈ ಮೇಲ್ಕಂಡ ಅರ್ಜಿಯನ್ನು ಅರ್ಜಿದಾರರು ತಮ್ಮ ತಂದೆ ಮತ್ತು 2ನೇ ಅರ್ಜಿದಾರರ ಗಂಡನಾದ ಶ್ರೀ ಎಂ.ಪಿ. ಬಸವರಾಜ ಬಿನ್ ಲೇಟ್ ಪಂಚಾಕ್ಷರಪ್ಪ ಇವರು ದಿನಾಂಕ : 20.06.1992ರಂದು #241/, ಪಿ.ಜೆ. ಬಡಾವಣೆ, 4ನೇ ಮುಖ್ಯ ರಸ್ತೆ, 4ನೇ ಕ್ರಾಸ್, ದಾವಣಗೆರೆಯಲ್ಲಿ ಮರಣ ಹೊಂದಿದ್ದು. ಸದರಿ ಶ್ರೀ ಎಂ.ಪಿ. ಬಸವರಾಜ ಬಿನ್ ಲೇಟ್ ಪಂಚಾಕ್ಷರಪ್ಪ ಇವರ ಮರಣದ ದಿನಾಂಕ ಎದುರುದಾರರ ಕಛೇರಿಯಲ್ಲಿ ನೋಂದಾವಣೆಯಾಗದೇ ಇರುವ ಕಾರಣ ಮರಣ ಸಮರ್ಥನಾ ಪತ್ರವನ್ನು ನೀಡಲು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಈ ರೀತಿ ಸದರಿ ಶ್ರೀ ಎಂ.ಪಿ. ಬಸವರಾಜ ಬಿನ್ ಲೇಟ್ ಪಂಚಾಕ್ಷರಪ್ಪ ಇವರ ಮರಣ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ಜನನ ಮತ್ತು ಮರಣ ನೋಂದಾವಣೆ ದಾಖಲೆಯಲ್ಲಿ ನಮೂದು ಮಾಡಲು ಮತ್ತು ಮರಣ ಸಮರ್ಥನಾ ಪತ್ರವನ್ನು ನೀಡಲು ನಿರ್ದೇಶನ ನೀಡಿ ಆದೇಶ ಮಾಡುವುದಕ್ಕೆ ಸದರಿ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿದ್ದು, ಈ ಬಗ್ಗೆ ಬೇರೆ ಯಾರದಾದರೂ ತಂಟೆ ತಕರಾರು ಇದ್ದಲ್ಲಿ ದಿನಾಂಕ: 8-4-2024 ರಂದು ಬೆಳಗ್ಗೆ 11.00 ಸಮಯಕ್ಕೆ ಮೇಲ್ಕಂಡ ನ್ಯಾಯಾಲಯದಲ್ಲಿ ತಾವುಗಳು ಖುದ್ದಾಗಿ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದೇ ವ್ಯಕ್ತಿಗಳು ಹಾಜರಾಗಿ ತಕರಾರು ಸಲ್ಲಿಸದಿದ್ದಲ್ಲಿ ಅರ್ಜಿದಾರರ ಅರ್ಜಿಯನ್ನು ಏಕಪಕ್ಷೀಯವಾಗಿ ಯಾವುದೇ ವ್ಯಕ್ತಿಯ ತಕರಾರು ಇಲ್ಲವೆಂದು ಪರಿಗಣಿಸಿ ಪ್ರಕರಣದ ಅರ್ಹತೆ ಆಧಾರದ ಮೇಲೆ ಆದೇಶ ಮಾಡಲಾಗುವುದು.

**(ಎಂ.ಕೆ.ಸತೀಶ್)**
ಅರ್ಜಿದಾರರ ಪರ ವಕೀಲರು
ದಾವಣಗೆರೆ
ದಿನಾಂಕ : 01.03.2024

ನ್ಯಾಯಾಲಯದ ಆದೇಶದ ಮೇರೆಗೆ,
**ಶಿರಸ್ತೇದಾರರು**
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ & ಜೆ.ಎಂ.ಎಫ್.ಸಿ. ದಾವಣಗೆರೆ.

## ಕರಾವಳಿ ಭದ್ರತೆಗೆ ಡ್ರೋನ್ ಅಳವಡಿಕೆ

ಮುಂಬೈ, ಮಾ. 3 - ಕರಾವಳಿ ಭದ್ರತೆ ಹೆಚ್ಚಿಸುವ ಸಲುವಾಗಿ ಮುಂಬೈ ಹಾಗೂ ಗೋವಾ ಕರಾವಳಿ ಪ್ರಾಂತ್ಯದಲ್ಲಿ ಡ್ರೋನ್ ನಿಗಾ ವ್ಯವಸ್ಥೆ ಅಳವಡಿಸಲು ಪರಿಶೀಲಿಸುತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಮೂವರು ವ್ಯಕ್ತಿಗಳು ಇತ್ತೀಚೆಗೆ ಭಾರತದಲ್ಲಿ ದೋಣಿ ಮೂಲಕ ನುಸುಳಿದ್ದು ಕಂಡು ಬಂದಿತ್ತು. ನಂತರದಲ್ಲಿ ನಿಗಾ ಹೆಚ್ಚಿಸಲು ಡ್ರೋನ್ ಬಳಕೆಗೆ ಪರಿಗಣಿಸಲಾಗುತ್ತಿದೆ.

ಡ್ರೋನ್‌ಗಳು ಕರಾವಳಿ ಪ್ರಾಂತ್ಯದಲ್ಲಿ ಸಂಚರಿಸುವ ಹಡಗುಗಳ ಚಿತ್ರಗಳನ್ನು ರವಾನಿಸಲಿವೆ. ಇದು ರಕ್ಷಣಾ ವಲಯಕ್ಕೆ ನೆರವಾಗಲಿದೆ.

## ಉಕ್ಕಡಗಾತ್ರಿ ಅಜ್ಜಯ್ಯನಿಗೆ ಚಿನ್ನದ ಕಿರೀಟ ಸಿದ್ಧ




ಮಲೇಬೆನ್ನೂರು, ಮಾ.2- ಸುಕ್ಷೇತ್ರ ಉಕ್ಕಡ ಗಾತ್ರಿಯ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನಿಗೆ ಭಕ್ತರ ನೆರವಿನಿಂದ ಸುಮಾರು 2.5 ಕೆ. ಜಿ ತೂಕದ ಚಿನ್ನದ ಕಿರೀಟ ಸಿದ್ಧಗೊಂಡಿದ್ದು, ಇದೇ ದಿನಾಂಕ 10 ರಂದು ಜರುಗುವ ರಥೋತ್ಸವದ ದಿನ ಅಜ್ಜಯ್ಯನಿಗೆ ಹಾಕಲಾಗುವುದೆಂದು ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

## ಒಡಿಶಾ : ಡಿ.ಆರ್. ಡಿ.ಒ. ಕೇಂದ್ರದ ಸೈನಿಕ ಆತ್ಮಹತ್ಯೆ

ಕೇಂದ್ರಪಾರ (ಒಡಿಶಾ), ಮಾ. 3 - ಒಡಿಶಾದ ಕೇಂದ್ರಪಾರ ಜಿಲ್ಲೆಯ ಡಿ.ಆರ್. ಡಿ.ಒ.ದ ಕೇಂದ್ರವೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದ 35 ವರ್ಷದ ಸೈನಿಕ, ತನ್ನ ಸೇವಾ ಬಂದೂಕಿನಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ತಮಿಳುನಾಡಿನ ಸಿಪಾಯಿ ರಾಜ್ ಶೇಖರನ್ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

## ನಗರದಲ್ಲಿ ಇಂದು ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಸ್ಮರಣೆ



ಅಖಿಲ ಭಾರತ ಶಿವಾಚಾರ್ಯ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷರು ಹಾಗೂ ದಾವಣಗೆರೆ ಹಿರೇಮಠದ ಸ್ಥಿರಪಟ್ಟಾಧ್ಯಕ್ಷರಾಗಿದ್ದ ಡಾ. ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಇವರ 16ನೇ ಸಂಸ್ಮರಣೋತ್ಸವ ಕಾರ್ಯಕ್ರಮವು ಇಂದು ಸಂಜೆ 6.30ಕ್ಕೆ ನಡೆಯಲಿದೆ.

ಎಡೆಯೂರು ಕ್ಷೇತ್ರದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ, ಕಬ್ಬಿಣ ಕಂಥಿಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ವಹಿಸಲಿದ್ದಾರೆ. ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ದಾವಣಗೆರೆ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ಜಿ.ವಿಜಯಕುಮಾರ್ ಇವರು ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ವಿಷಯ ಕುರಿತು ಉಪನ್ಯಾಸ ನೀಡುವರು.


ಹೃತ್ಪೂರ್ವಕ ಅಭಿನಂದನೆಗಳು




ಕರ್ನಾಟಕ ಸರ್ಕಾರದಿಂದ ಬ್ರಾಹ್ಮಣ ಅಭಿವೃದ್ಧಿ ನಿಗಮ ಮಂಡಳಿಯ ಅಧ್ಯಕ್ಷರಾಗಿ ನೇಮಕಗೊಂಡು ಇಂದು ಅಧಿಕಾರ ವಹಿಸಿಕೊಳ್ಳುತ್ತಿರುವ, ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ಸೇವೆ ಸಲ್ಲಿಸಿರುವ ಪಕ್ಷದ ಹಿರಿಯರು, ಬ್ರಾಹ್ಮಣ ಸಮಾಜದ ಮುಂಚೂಣಿ ನಾಯಕರು, ಆತ್ಮೀಯರೂ ಆಗಿರುವ

ಶ್ರೀ ಅಸಗೋಡು ಜಯಸಿಂಹ


ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಇವರನ್ನು ನೇಮಕ ಮಾಡಿರುವ ಜನಪ್ರಿಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೂ, ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್ ಅವರುಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಇವರ ಅಧಿಕಾರವಧಿಯಲ್ಲಿ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯು ಸರ್ವತೋಮುಖ ಅಭಿವೃದ್ಧಿ ಹೊಂದಲೆಂದು ಶುಭ ಹಾರೈಸುತ್ತೇನೆ.





ನಾಗಭೂಷನ್ ರಾವ್ ಎನ್.ಆರ್
ಛೇರ್ಮನ್
ಪಿಕಾಕ್ ಗ್ರೂಪ್ ಆಫ್ ಕಂಪನೀಸ್





॥ ಶ್ರೀ ಲಕ್ಷ್ಮೀ ರಂಗನಾಥ ಪ್ರಸೀದಂತು ॥

ಹೃತ್ಪೂರ್ವಕ ಧನ್ಯವಾದಗಳು

ಸಹೃದಯರಿಗೆ ಪ್ರೀತಿ ಪೂರ್ವಕ ನಮನಗಳು.

ವಿವಾಹ ಮಹೋತ್ಸವದಂತಹ ಕಾರ್ಯವು ಯಶಸ್ವಿಯಾಗಿ ನೆರವೇರಲು ಶ್ರೀಹರಿ-ವಾಯು-ಗುರುಗಳ ಆಶೀರ್ವಾದವೇ ಕಾರಣ. ಮೇಲಾಗಿ ತಮ್ಮಂತಹ ಸಹೃದಯರ ತಾತ್ವಿಕ ಬೆಂಬಲವೂ ಅಷ್ಟೇ ಪ್ರಮುಖವಾದದ್ದು. ತಾವುಗಳು ನಮ್ಮ ಕುಟುಂಬ ವರ್ಗದವರ ಮೇಲೆ ಇಟ್ಟಿರುವ ಪ್ರೀತಿ, ವಾತ್ಸಲ್ಯ ದೊಡ್ಡದು. ತಮ್ಮ ಬಿಡುವಿಲ್ಲದ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು, ನಮ್ಮ ಮಗ ಚಿ॥ ನಿರಂಜನನ ವಿವಾಹ ಮಹೋತ್ಸವಕ್ಕೆ / ಆರತಕ್ಷತೆಗೆ ಆಗಮಿಸಿ, ವಧೂ-ವರರನ್ನು ಆಶೀರ್ವದಿಸಿದ್ದೀರಿ. ತಮಗೆ ಹೃತ್ಪೂರ್ವಕ ಧನ್ಯವಾದಗಳನ್ನು ಈ ಮೂಲಕ ಅರ್ಪಿಸುತ್ತೇವೆ. ಕಾರ್ಯಕ್ರಮಗಳ ನಡುವೆ ತಮ್ಮನ್ನು ಸರಿಯಾಗಿ ಸತ್ಕರಿಸಲಾಗಲಿಲ್ಲ. ಅದಾಗ್ಯೂ, ತಾವು ಹರ್ಷಚಿತ್ತರಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಮ್ಮ ಕುಟುಂಬದ ಎಲ್ಲಾ ಸದಸ್ಯರ ಅಭಿಮಾನಕ್ಕೆ ಪಾತ್ರರಾಗಿದ್ದೀರಿ. ತಮ್ಮಗಳ ಪ್ರೀತಿ, ವಾತ್ಸಲ್ಯ ಮುಂದೆಯೂ ನಮ್ಮ ಕುಟುಂಬದವರ ಮೇಲಿರಲಿ ಎಂದು ಆಶಿಸುತ್ತೇವೆ.

ವಂದನೆಗಳೊಂದಿಗೆ,

ಡಾ॥ ಸಿ.ಕೆ. ಆನಂದತೀರ್ಥಾಚಾರ್,
ಜ್ಯೋತಿಷ್ಯ ಕೋವಿದ ಮತ್ತು ವಾಸ್ತು ತಜ್ಞರು
# 361, ಮೊದಲ ಮಹಡಿ, ದೀಕ್ಷಿತ್ ರಸ್ತೆ,
4ನೇ ತಿರುವು, ಕೆ.ಬಿ. ಬಡಾವಣೆ, ದಾವಣಗೆರೆ.
ಮೊ. 9448924239, 8073537647

ತಮ್ಮ ವಿಶ್ವಾಸಿಗಳು,
ಶ್ರೀಮತಿ ವೀಣಾ ಮತ್ತು
ಡಾ॥ ಸಿ.ಕೆ. ಆನಂದತೀರ್ಥಾಚಾರ್
ಮತ್ತು ಕುಟುಂಬ ವರ್ಗದವರು





ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 7ನೇ ಮಾರ್ಚ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ





SPARSH HOSPITAL
THE TOUCH OF LIFE

ನಿಮ್ಮ ಕಾಲುಗಳ ಮೇಲಿನ ಕಾಳಜಿ ಕಡಿಮೆಯಾಗದಿರಲಿ
ಸ್ಪರ್ಶ್ ಆಸ್ಪತ್ರೆ
ಉಬ್ಬಿರುವ ರಕ್ತನಾಳಗಳ ಚಿಕಿತ್ಸಾ ಕ್ಲಿನಿಕ್

ಡಾ॥ ನವೀನ್ ಸಿ
MD (RD), DNB (RD), DM (NIIR), MNAMS
ಸಲಹೆಗಾರ – ಇಂಟರ್ವೆನ್ಷನಲ್ ರೇಡಿಯಾಲಜಿ
ಸ್ಪರ್ಶ್ ಆಸ್ಪತ್ರೆ, ಯಶವಂತಪುರ

ಈ ಕ್ಲಿನಿಕ್‌ಗೆ ಯಾರು ಭೇಟಿ ನೀಡಬಹುದು?
ಕಾಲಿನಲ್ಲಿ ನೋವು । ರಕ್ತನಾಳದ ಊತ ಕಾಣಿಸಿಕೊಂಡಲ್ಲಿ । ಕಪ್ಪು ಚುಕ್ಕೆಗಳು । ತುರಿಕೆ । ವಾಸಿಯಾಗದ ನರದ ಹುಣ್ಣು । ಆಯಾಸ ಮತ್ತು ಹೆಚ್ಚಿನ ತೂಕವಿದ್ದವರು

ಎಂಡೋವ್ಯಾಸ್ಕುಲಾರ್ ವೈದ್ಯರೊಂದಿಗೆ ಸಮಾಲೋಚನೆ ₹ 300/-*

6ನೇ ಮಾರ್ಚ್ 2024 ಪ್ರತಿ ತಿಂಗಳು 1ನೇ ಗುರುವಾರ ಲಭ್ಯವಿದೆ
ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002
ನೋಂದಣಿಗಾಗಿ ಕರೆಮಾಡಿ: +91 99800 33277

*T & C Apply



ದಾವಣಗೆರೆಯ ವಿವಿಧೆಡೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ



ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು ಇವರಿಂದ



04.03.2024 ಸೋಮವಾರದಂದು

| ಕಾಮಗಾರಿಗಳ ವಿವರ | ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ) | ಸಮಯ ಮತ್ತು ಸ್ಥಳ |
|---|---|---|
| ಶ್ರೀ ಸಾಯಿಬಾಬಾ ಮಂದಿರ, ಎಂ.ಸಿಸಿ. 'ಎ' ಬ್ಲಾಕ್ ರಸ್ತೆಯ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆ | -- | ಮಧ್ಯಾಹ್ನ 12 ಗಂಟೆಗೆ ಶ್ರೀ ಸಾಯಿಬಾಬಾ ಮಂದಿರ ಮುಂಭಾಗ |
| ಮೋತಿ ವೀರಪ್ಪ ಜ್ಯೂನಿಯರ್ ಕಾಲೇಜು ಆವರಣದಲ್ಲಿ 6 ಕೊಠಡಿಗಳ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ | 150 ಲಕ್ಷಗಳು | ಮಧ್ಯಾಹ್ನ 12.15 ಗಂಟೆಗೆ ಮೋತಿ ವೀರಪ್ಪ ಜ್ಯೂನಿಯರ್ ಕಾಲೇಜು ಆವರಣ |
| ಜಿಲ್ಲಾ ಪಂಚಾಯತ್ ಅಧಿಕಾರಿಗಳ ವಸತಿ ಗೃಹಗಳ ಹಾಗೂ ದಾವಣಗೆರೆ ತಾಲ್ಲೂಕು ಪಂಚಾಯತ್ ಕಟ್ಟಡದ ಉದ್ಘಾಟನೆ | 540 ಲಕ್ಷಗಳು | ಮಧ್ಯಾಹ್ನ 12.30 ಗಂಟೆಗೆ ಜಿಲ್ಲಾ ಪಂಚಾಯತ್ ಕಚೇರಿ ಆವರಣ |
| ಶಿವಕುಮಾರ ಸ್ವಾಮಿ ಬಡಾವಣೆ ಮುಖ್ಯರಸ್ತೆಯ (ಈಶ್ವರ ಮತ್ತು ಗಣಪತಿ ದೇವಸ್ಥಾನ) ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆ | 4.99 ಕೋಟಿಗಳು 1 ಮತ್ತು 4ನೇ ಕಾಮಗಾರಿ ಸೇರಿ | ಮಧ್ಯಾಹ್ನ 1.00 ಗಂಟೆಗೆ ಶಿವಕುಮಾರಸ್ವಾಮಿ ಬಡಾವಣೆ |
| ಎ.ವಿ.ಕೆ. ಕಾಲೇಜು ರಸ್ತೆಯ ಮಹಾತ್ಮಗಾಂಧಿ ವಿದ್ಯಾರ್ಥಿ ನಿಲಯ ಕೊಠಡಿ ಕಾಮಗಾರಿಯ ಭೂಮಿ ಪೂಜೆ | -- | ಮಧ್ಯಾಹ್ನ 1.30 ಗಂಟೆಗೆ ಮಹಾತ್ಮಗಾಂಧಿ ಕಾಲೇಜು ಆವರಣ |

ಪ್ರಕಟಣೆ : ದಾವಣಗೆರೆ ಜಿಲ್ಲಾ ಕಾಂಗ್ರೆಸ್

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ದಾವಣಗೆರೆ ಜಿಲ್ಲಾಧಿಕಾರಿಗಳಿಗೂ, ದಾವಣಗೆರೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೂ, ಶಿಕ್ಷಣ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳೂ, ಸ್ಮಾರ್ಟ್ ಸಿಟಿ ಅಧಿಕಾರಿಗಳೂ, ಸಮಾಜ ಕಲ್ಯಾಣ ಅಧಿಕಾರಿಗಳೂ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ ಸುಸ್ವಾಗತ